

# ಗೀತಾಮನನ

ಪ್ರಕಾಶಕರು :
ಅಧ್ಯಾತ್ಮ ಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ
2002

## ಭಗವದ್ಗೀತೆಯ ವಿಷಯದಲ್ಲಿ ಪ್ರಕಟಿತವಾಗಿರುವ ಕೆಲವು ಗ್ರಂಥಗಳು

೧. **ಗೀತಾಮನನ :** ಕಾರ್ಯಾಲಯದ ಪಂಡಿತರಾದ ವೇ|| ಲಕ್ಷ್ಮೀನರಸಿಂಹ ಮೂರ್ತಿಗಳು ಭಗವದ್ಗೀತೆಯ ಕೆಲವು ಮೆಚ್ಚಾದ 101 ಶ್ಲೋಕಗಳನ್ನು ಅಧ್ಯಾಯಕ್ರಮದಿಂದ ಸಂಗ್ರಹಿಸಿ ಪ್ರತಿಪದಾರ್ಥಸಮೇತ ಗೀತೆಯಸಾರವನ್ನು ಮನನಮಾಡಲು ಅನುಕೂಲವಾಗುವಂತೆ ಬರೆದು, ವಿಶೇಷವಾಗಿ ಶಿಕ್ಷಣ ಕ್ಷೇತ್ರದ ಮೇಲೆ ಗೀತೆಯ ಪ್ರಭಾವವನ್ನು ಬೀರಲು ಕೈಗೊಂಡಿರುವ ಪುಸ್ತಕವಿದು. ಚಿಕ್ಕ ಮಕ್ಕಳಿಗೂ, ಸ್ತ್ರೀಯರಿಗೂ ವಿದ್ಯಾರ್ಥಿವಿದ್ಯಾರ್ಥಿನಿಯರಿಗೂ ಗೀತೆಯ ಪರಿಚಯ ವನ್ನು ಮಾಡಿಕೊಡುವ ಅತ್ಯುತ್ತಮವಾದ ಪುಸ್ತಕ. 1972ರಲ್ಲಿ **ಸ್ತುತಿಪುಷ್ಪಾಂಜಲಿ** ಪುಸ್ತಕದಲ್ಲಿ ಅಡಕವಾಗಿತ್ತು. ಈಗ ಬೇರೆ ಪುಸ್ತಕವಾಗಿಯೇ ಹೊರತಂದಿದೆ.

**ಈಗ ಇದು ನಿಮ್ಮ ಕೈಯಲ್ಲಿದೆ.**

**(ಮೂರನೆಯ ಮುದ್ರಣ : 2002 ಪು. ಕ್ರೌನ್ 4+46)**

**೨. ಶ್ರೀಮದ್ಭಗವದ್ಗೀತೆಯ ಸಾರ ಮತ್ತು ಪ್ರಧಾನೋಪದೇಶಗಳು :**

ಶ್ರೀಶ್ರೀಗಳವರು **ಶ್ರೀಮದ್ಭಗವದ್ಗೀತಾಭಾಷ್ಯ** ಗ್ರಂಥದಲ್ಲಿ ಪ್ರತಿ ಅಧ್ಯಾಯದ ಕೊನೆಯಲ್ಲಿ ಸಂಗ್ರಹಿಸಿ ಕೊಟ್ಟಿರುವ ಸಾರಗಳನ್ನೆಲ್ಲಾ ಸೇರಿಸಿ ಒಟ್ಟಿಗೆ ಪ್ರಕಟಿಸಿರುವ ಗ್ರಂಥವಿದು. ಮತ್ತು ಶ್ರೀಶ್ರೀಗಳವರೇ 1967ನೇ ಗೀತಾಜಯಂತಿಯ ಸಂದರ್ಭದಲ್ಲಿ **ಶ್ರೀಮದ್ಭಗವದ್ಗೀತೆಯ ಪ್ರಧಾನೋಪದೇಶಗಳು** ಎಂಬ ಉಪನ್ಯಾಸವನ್ನೂ ಕೊನೆಯಲ್ಲಿ ಸೇರಿಸಿದೆ. ಗೀತಾಪ್ರಿಯರಾದ ವಾಚಕರೆಲ್ಲರೂ ಓದಲೇಬೇಕಾದ ಗ್ರಂಥವಿದು.

**(ಮೂರನೆಯ ಮುದ್ರಣ : 2002 ; ಪುಟಗಳು. ಕ್ರೌನ್, 4 + 56)**

**೩. ಭಗವದ್ಗೀತಾಭಾಷ್ಯ :**

ಭಗವದ್ಗೀತೆಯ ಹೆಚ್ಚುಗಾರಿಕೆ, ಅದರಲ್ಲಿಯೂ **ಶ್ರೀಶಾಂಕರಭಾಷ್ಯ ಸಮೇತ**ವಾದ ಈ ಗ್ರಂಥದ ಮಹಿಮೆಯನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ. **ಪ್ರವೃತ್ತಿ ನಿವೃತ್ತಿ** - ಎಂಬ ಎರಡು ಬಗೆಯ ಧರ್ಮಗಳ ಸ್ವರೂಪವನ್ನೂ, ಪ್ರವೃತ್ತಿ ಧರ್ಮವು ನಿವೃತ್ತಿ ಧರ್ಮಕ್ಕೆ ದ್ವಾರವಾಗುವ ಬಗೆಯನ್ನೂ ಇಲ್ಲಿ ತಿಳಿಸಿಕೊಟ್ಟಿದೆ. ಸರ್ವಕರ್ಮ ಸಂನ್ಯಾಸಪೂರ್ವಕವಾಗಿ ಆತ್ಮಜ್ಞಾನನಿಷ್ಠೆಯನ್ನು ಪಡೆಯುವವರಿಗೆ ಸಂಸಾರ ಬಂಧನದಿಂದ ಆತ್ಯಂತಿಕವಾಗಿ ಬಿಡುಗಡೆಯಾಗುವುದೆಂಬುದನ್ನು ಪ್ರತಿಪಾದಿಸುವದರ ಮೂಲಕ ಸಾಧನ-ಸಿದ್ಧಾಂತಗಳ ಸಂಬಂಧವನ್ನು ವಿಶದಗೊಳಿಸುವ ಗ್ರಂಥವಿದು.

*(ರಕ್ಷಾಕವಚದ 4ನೇ ಪುಟದಲ್ಲಿ ಮುಂದುವರೆದಿದೆ)*

# ಗೀತಾಮನನ

ಬರೆದವರು :

ಅಧ್ಯಾತ್ಮವಿದ್ಯಾ ಪ್ರವೀಣ

**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ ೧೭೯

ಪ್ರಕಾಶಕರು :

**ಅಧ್ಯಾತ್ಮಪ್ರಕಾಶಕಾರ್ಯಾಲಯ**

ಹೊಳೆನರಸೀಪುರ - 573 211

ದೂ. : 08175-73820

2002

ಮೊದಲನೆಯ ಮುದ್ರಣ : 1972 ( 1000 ಪ್ರತಿಗಳು)
(ಸ್ತುತಿ ಪುಷ್ಪಾಂಜಲಿಯೊಡನೆ)
ಎರಡನೆಯ ಮುದ್ರಣ : 1978 (2000 ಪ್ರತಿಗಳು)
ಮೂರನೆಯ ಮುದ್ರಣ : 2002 ( 2000 ಪ್ರತಿಗಳು)

© ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶ ಕಾರ್ಯಾಲಯದವು
All rights Reserved

ಅಕ್ಷರ ಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 10/ 1, 3ನೇ ಮುಖ್ಯರಸ್ತೆ
ನಾಗಸಂದ್ರ, ತ್ಯಾಗರಾಜನಗರ
ಬೆಂಗಳೂರು - 560 028
ದೂರವಾಣಿ : 6764650

ಮುದ್ರಕರು :
**ಶ್ರೀಗಣೇಶಮಾರುತಿ ಪ್ರಿಂಟರ್ಸ್**
ನಂ. 76, 6ನೇ ಮುಖ್ಯರಸ್ತೆ
3ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು - 560 028
ದೂರವಾಣಿ : 6766342

# ಮುನ್ನುಡಿ

**ಗೀತಾಮನನ -** ಎಂಬ ಈ ಚಿಕ್ಕ ಪುಸ್ತಕವು ಈಗ ಮೂರನೆಯ ಬಾರಿಗೆ ಪ್ರಕಟವಾಗುತ್ತಿದೆ. ಇದನ್ನು ಬರೆದ ಗ್ರಂಥಕರ್ತರು ಏಳುನೂರು ಶ್ಲೋಕಗಳುಳ್ಳ ಭಗವದ್ಗೀತೆಯನ್ನು ಒಂದು ನೂರು ಶ್ಲೋಕಗಳಿಗೆ ಸಂಕ್ಷೇಪಿಸಿ, ಅಳವಡಿಸಿ ಗೀತೆಯ ಉಪದೇಶಗಳನ್ನು ಎಲ್ಲರೂ ಅಲ್ಪಕಾಲದಲ್ಲಿ ಪಾರಾಯಣ, ಅರ್ಥಾನುಸಂಧಾನಗಳನ್ನು ಮಾಡಿ ಗೀತಾಚಾರ್ಯನ ಕೃಪಾಪಾತ್ರರಾಗುವಂತೆ ಏರ್ಪಡಿಸಿದ್ದಾರೆ. ಕಾಲಾವಕಾಶವು ನವನಾಗರಿಕತೆಯ ಪ್ರಭಾವದಿಂದ ಅಲ್ಪವಾಗಿದ್ದು ಗೀತಾ ಪ್ರೇಮಿಗಳಿಗೆ ಸೌಕರ್ಯವಾಗಲೆಂಬ ಕಾರಣದಿಂದ ಗೀತೆಯಲ್ಲಿನ ಪ್ರಧಾನಶ್ಲೋಕಗಳನ್ನೇ ಆಯ್ದು ಅರ್ಥಾನುಸಂಧಾನಕ್ಕೆ ಹೊಂದುವಂತೆ ಜೋಡಿಸಿ ಇಡಿಯ ಗೀತೆಯ 18 ಅಧ್ಯಾಯಗಳ ತಿರುಳನ್ನೂ ಇಲ್ಲಿ ಸಂಗ್ರಹಿಸಲಾಗಿದೆ. ಶ್ಲೋಕಗಳಿಗೆ ಸಂಬಂಧವನ್ನು ಕಲ್ಪಿಸುವ ಅವತರಣಿಕೆಯನ್ನೂ ಅಲ್ಲಲ್ಲಿ ಜೋಡಿಸಿ ವಾಚಕರಿಗೆ ಗೀತೆಯ ತಿರುಳನ್ನು ಉಣಬಡಿಸಿದ ಗೀತಾ ಪ್ರೇಮಿಗಳು ಇದನ್ನು ಪಠಿಸಿ ಕೃತಾರ್ಥರಾಗಲೆಂದು ಹಾರೈಸಲಾಗಿದೆ.

ಚಿಕ್ಕಮಕ್ಕಳಿಗೂ ಸ್ತ್ರೀಯರಿಗೂ ವಿದ್ಯಾರ್ಥಿವಿದ್ಯಾರ್ಥಿನಿಯರಿಗೂ ಗೀತೆಯ ಪರಿಚಯವನ್ನು ಮಾಡಿಕೊಡುವ ಈ ಪುಸ್ತಕವನ್ನು ವಾಚಕರು ಆದರದಿಂದ ಬರಮಾಡಿಕೊಳ್ಳುವರೆಂದು ಆಶಿಸಲಾಗಿದೆ.

ಹೊಳೆನರಸೀಪುರ

ತಾ. ೨೧-೨-೨೦೦೨

ಇತಿ,

**ಪ್ರಕಾಶಕರು**

# ಓದುಗರಿಗೆ

ಈ ಚಿಕ್ಕಪುಸ್ತಕವನ್ನು ದಯವಿಟ್ಟು ಮೊದಲು ಓದಿರಿ. ಅನಂತರ ಗೀತಯ ವಿಚಾರವಾಗಿ ಕಾರ್ಯಾಲಯದಲ್ಲಿ ದೊರಕುವ -

(1) ಭಗವದ್ಗೀತೆಯ ಸಾರ ಮತ್ತು ಪ್ರಧಾನೋಪದೇಶಗಳು.
(2) ಭಗವದ್ಗೀತೆಯ ಉಪನ್ಯಾಸಗಳು.
(3) ಗೀತಾ ಶಾಸ್ತ್ರಾರ್ಥ ವಿವೇಕ -

ಈ ಗ್ರಂಥಗಳನ್ನು ಓದಬಹುದಾಗಿದೆ.

ಇನ್ನೂ ಹೆಚ್ಚಿನ ತಿಳುವಳಿಕೆಯನ್ನು ಬಯಸುವವರು **ಶ್ರೀಮದ್ ಭಗವದ್ಗೀತಾಭಾಷ್ಯ** -(ಶಾಂಕರಭಾಷ್ಯಮೂಲ, ಅನುವಾದ, ಟಿಪ್ಪಣಿ ಸಹಿತ) ಅಧ್ಯಯನ ಮಾಡಬಹುದು.

ಗೀತಾಪಾಠಕರೆಲ್ಲರಿಗೂ ಗೀತಾಚಾರ್ಯನ ಕೃಪೆ ಯುಂಟಾಗಲೆಂದು ಪ್ರಾರ್ಥಿಸಿದೆ.

**ಗ್ರಂಥಕರ್ತ**

|| ಓಂ ||

# ಗೀತಾಮನನ

## ಮಂಗಳ

**ವಸುದೇವಸುತಂ ದೇವಂ ಕಂಸಚಾಣೂರಮರ್ದನಮ್।**

**ದೇವಕೀಪರಮಾನನ್ದಂ ಕೃಷ್ಣಂ ವನ್ದೇ ಜಗದ್ಗುರುಮ್॥** ೧

**ಅರ್ಥ :** ವಸುದೇವಸುತಂ - ವಸುದೇವನ ಮಗನಾದ, ಕಂಸಚಾಣೂರ ಮರ್ದನಮ್ - ಕಂಸ, ಚಾಣೂರರನ್ನು ನಾಶಮಾಡಿದ, ದೇವಕೀಪರಮಾನನ್ದಂ - ದೇವಕಿಗೆ ಪರಮಸಂತೋಷವನ್ನು ಕೊಡುವ, ಜಗದ್ಗುರುಂ - ಜಗದ್ಗುರುವಾದ, ದೇವಂ - ಪೂಜ್ಯನಾದ, ಕೃಷ್ಣಂ - ಶ್ರೀಕೃಷ್ಣನನ್ನು, ವಂದೇ - ನಮಸ್ಕರಿಸುತ್ತೇನೆ.

## ಪೀಠಿಕೆ

ನಮ್ಮ ಭರತಖಂಡದ ಸಂಸ್ಕೃತಿಯು ಅತ್ಯಂತ ಪುರಾತನವಾದದ್ದು. ಭೂಮಂಡಲದಲ್ಲಿರುವ ನಾಗರಿಕದೇಶಗಳ ಸಂಸ್ಕೃತಿಗಳ ಮೂಲವೆಲ್ಲವೂ ಇದರಲ್ಲೇ ಅಡಕವಾಗಿದೆ. ಇಂಥ ಸಂಸ್ಕೃತಿಯ ಸ್ವರೂಪವನ್ನೂ ಪರಿಚಯವನ್ನೂ ಮಾಡಿಕೊಡಲು ನಮ್ಮಲ್ಲಿ ವೇದಗಳೇ ಮುಂತಾದ ಅನೇಕ ಗ್ರಂಥ ರಾಶಿಗಳು ನಮ್ಮ ಸೌಭಾಗ್ಯದಿಂದ ಈಗಲೂ ಲಭ್ಯವಾಗಿವೆ. ಇವುಗಳಲ್ಲಿ ಮಾನವನ ಹುಟ್ಟು, ಅದರ ಉದ್ದೇಶ, ಸೃಷ್ಟಿಕರ್ತನಿಗೂ ಅವನಿಗೂ ಇರುವ ಸಂಬಂಧ, ಮತ್ತೊಬ್ಬ ಮಾನವನೊಡನೆ ನಡೆದು ಕೊಳ್ಳಬೇಕಾದ ರೀತಿನೀತಿಗಳು - ಇವುಗಳ ವಿಚಾರವೇ ಅಲ್ಲದೆ, ಮಾನವನ ವಿದ್ಯೆ, ಆರೋಗ್ಯ, ಸುಖಗಳಿಗೆ ಮಾಡಬೇಕಾದ ಪ್ರಯತ್ನಗಳು - ಎಲ್ಲಕ್ಕಿಂತ ಹೆಚ್ಚಾಗಿ ಮಾನವರೆಲ್ಲರ ಅಥವಾ ಇಡಿಯ ಜಗತ್ತಿನ ತಿರುಳಾದ ಭಗವಂತನ ಜ್ಞಾನವನ್ನು ಸಂಪಾದಿಸುವ ಹಾಗೂ ನಿತ್ಯಶಾಂತಿ ನಿತ್ಯಸುಖಗಳನ್ನು ಪಡೆಯಲು ಸಾಧನಗಳು - ಹೀಗೆ ಅನೇಕ ಅಮೋಘ ವಿಷಯಗಳ ಉಪದೇಶಗಳು ಅಡಕವಾಗಿವೆ. ಈಗಿನ ಲೌಕಿಕ ವಿದ್ಯಾಭ್ಯಾಸಕ್ರಮದಲ್ಲಿ ಇಂಥ ಉಪದೇಶಗಳು ಬಾಲಕರಿಗೆ ತಿಳಿಯುವ ಅವಕಾಶಗಳು

ಕಡಿಮೆಯಾಗಿವೆ. ಇದರಿಂದ ವಿದ್ಯಾರ್ಥಿಗಳಿಗೆ ವಿದ್ಯೆಯ ಜೊತೆಗೆ ಅವಶ್ಯವಾಗಿ ಬರಬೇಕಾಗಿದ್ದ ವಿನಯವು ಕಣ್ಮರೆಯಾಗಿ ಯುವಕರು ಅಹಂಕಾರಿಗಳೂ ಸ್ವೇಚ್ಛಾಚಾರಿಗಳೂ ಆಗುವ ಸಂಭವವು ಹೆಚ್ಚಾಗಿಬಿಟ್ಟಿದೆ. ಇದರಿಂದ ದೇಶದ ಅಭ್ಯುದಯವೂ ವ್ಯಕ್ತಿಯ ಅಭ್ಯುದಯವೂ ಮೊಟಕಾಗಿ ಜಗತ್ತಿನಲ್ಲಿ ಆಸುರೀಸಂಪತ್ತೇ ಬೆಳೆಯುತ್ತಾ ಬಂದಿದ್ದು ವಿನಾಶಕ್ಕೆ ಹಾದಿಯಾಗುತ್ತಿದೆ. ಇಂಥ ಅನರ್ಥವನ್ನು ಪರಿಹಾರಮಾಡಲು ಈಗಿನ ಕಾಲಕ್ಕೂ ಅಧ್ಯಾತ್ಮವಿದ್ಯೆಯೊಂದು ಮಾತ್ರವೇ ಶಕ್ತವಾಗಿದೆ. **ನಾನ್ಯಃ ಪಂಥಾಃ-** ಎಂದಂತೆ ಬೇರೆಯ ದಾರಿಯೇ ಇರುವದಿಲ್ಲ.

ಈಗ ನಮ್ಮ ದೇಶವು ಸ್ವತಂತ್ರವಾಗಿದ್ದು ಸಾಮಾಜಿಕ, ರಾಜಕೀಯ, ಶಿಕ್ಷಣ - ಮುಂತಾದ ಕ್ಷೇತ್ರಗಳಲ್ಲಿ ಸುಧಾರಣೆಯನ್ನೂ ಪ್ರಗತಿಯನ್ನೂ ಸಾಧಿಸುತ್ತಿದ್ದೇವೆ. ಇವುಗಳಲ್ಲಿ ಶಿಕ್ಷಣಕ್ಷೇತ್ರವು ಮುಖ್ಯವಾದದ್ದು. ಏಕೆಂದರೆ ಸುಶಿಕ್ಷಿತರಾದ ಪ್ರಜೆಗಳಿಂದ ಮಾತ್ರವೇ ದೇಶದ ಅಭ್ಯುದಯವು ಸಾಧಿತವಾಗಬೇಕು. ಆದ್ದರಿಂದ ಶಿಕ್ಷಣಕ್ಷೇತ್ರಕ್ಕೆ ಒಳಪಟ್ಟ ವಿದ್ಯಾರ್ಥಿಗಳು, ಶಿಕ್ಷಕರು, ಪ್ರಚಾರಕರು - ಇಂಥವರು ಅತ್ಯವಶ್ಯವಾಗಿ ಅಧ್ಯಾತ್ಮವಿದ್ಯೆಯ ಪರಿಚಯವನ್ನು ಮಾಡಿಕೊಳ್ಳಲೇ ಬೇಕು. ಅದರಲ್ಲಿಯೂ ವಿದ್ಯಾರ್ಥಿಗಳಿಗಂತೂ ಈ ಬ್ರಹ್ಮವಿದ್ಯೆಯ ಶಿಕ್ಷಣವು ಬಹು ಅಗತ್ಯವಾಗಿದೆ. ಹಿಂದಿನ ಕಾಲಕ್ಕೆ ನಚೀಕೇತ - ಪ್ರಹ್ಲಾದರಂಥ ಬಾಲಕರೆಲ್ಲ ಈ ವಿದ್ಯೆಯಲ್ಲಿ ನಿಪುಣರಾಗಿದ್ದರು. ಇದನ್ನು **ರಾಜವಿದ್ಯೆ**ಯೆಂದೂ ಗೀತೆಯಲ್ಲಿ ಹೊಗಳಿದೆ.

**ಅಧ್ಯಾತ್ಮವಿದ್ಯೆ**ಯನ್ನು ಬಾಲ್ಯದಲ್ಲಿಯೇ ಕಲಿಸಬೇಕೆಂದು ಇತಿಹಾಸ ಪುರಾಣಗಳು ಬೋಧಿಸುತ್ತಿವೆ. ಈಗಿನ ಕಾಲದ ಶಿಕ್ಷಣಕ್ರಮದಲ್ಲಿ ಕೇವಲ ಪುಸ್ತಕಪಾಠವೇ ಪ್ರಧಾನವಾಗಿದ್ದು ವಿದ್ಯಾರ್ಥಿಗಳಿಗೆ ಸ್ವತಂತ್ರವಾಗಿ ಆಲೋಚಿಸುವ ಹಾಗೂ ಉದ್ಯಮಗಳನ್ನು ಮಾಡಲು ತಕ್ಕ ಮನಃಸ್ಥೈರ್ಯ, ವಿವೇಕ, ಸಹಕಾರ, ಧೈರ್ಯ, ಸೇವಾಮನೋಭಾವ, ಸಹಾನುಭೂತಿ- ಇಂಥ ಗುಣಗಳು ದೊರೆಯುವದು ಕಷ್ಟವಾಗಿದೆ. ಇವೆಲ್ಲವನ್ನೂ ನಾವು **ಗೀತೆಯ ಮನನ**ದಿಂದ ಅಳವಡಿಸಿಕೊಳ್ಳಬಹುದು. ಹೇಗೆಂದರೆ : ಯಾವ ಕೆಲಸವನ್ನು ಮಾಡಬೇಕು ? ಅಥವಾ ಮಾಡಬಾರದು ? - ಎಂಬ

ಸಂಶಯವು ಬಂದಾಗ **ಅರ್ಜುನನಂತೆ** ಬಲ್ಲವರನ್ನು ಕೇಳಿ ತಿಳಿದು ಕೊಳ್ಳಬೇಕೆಂಬ ನೀತಿಯು ಗೊತ್ತಾಗುವದು. ಶ್ರೀಕೃಷ್ಣನು ಹೇಗೆ ಯಾವ ಪ್ರಯೋಜನವೂ ತನಗೆ ಆಗಬೇಕಾದದ್ದಿಲ್ಲವಾದರೂ ಕರ್ತವ್ಯಕರ್ಮ ಗಳನ್ನು ಶ್ರದ್ಧೆ, ನಿಃಸ್ಪೃಹತೆ, ಪರೋಪಕಾರ, ತ್ಯಾಗಬುದ್ಧಿಗಳಿಂದ ಮಾಡುತ್ತಿದ್ದನೋ ಹಾಗೆಯೇ ನಾವೂ ಮಾಡಿದರೆ ಕೃತಕೃತ್ಯರಾಗುವೆ ವೆಂಬುದು ಗೊತ್ತಾಗುವದು.

ಈಗ್ಗೆ ವಿಶೇಷವಾಗಿ ವಿದ್ಯಾರ್ಥಿಗಳಾಗಿರುವವರು ತಮ್ಮ ಗುರಿಯನ್ನು ಹೇಗೆ ಕರ್ತವ್ಯಸಾಧನೆಗಾಗಿಯೇ ಇಟ್ಟುಕೊಳ್ಳಬೇಕು ? ಜೀವನ ಪರ್ಯಂತವೂ ವಿದ್ಯಾರ್ಜನೆಯನ್ನು ನಾನಾಮುಖಗಳಿಂದ ಹೇಗೆ ಮಾಡುತ್ತಲೇ ಇರಬೇಕು ? ವಿದ್ಯೆಯೆಂಬಿದು ಕೇವಲ ಅಕ್ಷರಪ್ರಧಾನ ವಾಗಿರದೆ ಹೃದಯಪ್ರಧಾನವಾಗಿದ್ದು ಜೀವನದಲ್ಲಿ ಅದು ಹೇಗೆ ಉಪಯೋಗಕ್ಕೆ ಬರಬೇಕು ? ಯಾವದೇ ವಿದ್ಯೆಯನ್ನು ಕಲಿತರೂ ಅದನ್ನು ಸ್ವ-ಪರಕಲ್ಯಾಣಕ್ಕಾಗಿ ಹೇಗೆ ಉಪಯೋಗಿಸಿಕೊಳ್ಳಬಹುದು ? ಎಂಬಂಥ ವಿಷಯಗಳಿಗೆಲ್ಲ ಗೀತೆಯು ಸಮರ್ಪಕವಾದ ಸರ್ವಸಮ್ಮತವಾದ ಉತ್ತರಗಳನ್ನು ನೀಡುತ್ತಿದೆ. ಶ್ರೀರಾಮಕೃಷ್ಣಪರಮಹಂಸರೆಂದಿರುವಂತೆ - ಗೀತೆಯನ್ನು ಓದಿದವನು ತ್ಯಾಗಿಯಾಗುತ್ತಾನೆ. ತ್ಯಾಗದಿಂದಲೇ ಅಮೃತತ್ವಪ್ರಾಪ್ತಿಯಾಗುವದು. ತ್ಯಾಗಬುದ್ಧಿಯು ಬೆಳೆದಂತೆಲ್ಲ ಕಾಮದ ಕಾಟವೂ ಕಡಿಮೆಯಾಗಿ **ಸರ್ವರಿಗಾಗಿ ತಾನು** - ಎಂಬ ಮನೋಭಾವವು ಬೆಳೆದು ಸ್ವಾರ್ಥಬುದ್ಧಿಯು ಕುಗ್ಗುವದು. ಇದೇ ನಿಜವಾದ **ವಿದ್ಯಾಭ್ಯಾಸ.** ಇಂಥ ವಿದ್ಯಾಭ್ಯಾಸವು ದೈಹಿಕ-ಮಾನಸಿಕ ರೂಪವಾದ ಆರೋಗ್ಯಗಳನ್ನು ಉಂಟುಮಾಡಿ ಇಹಪರಕಲ್ಯಾಣಕ್ಕೂ ಸಾಧನವಾಗುವದು.

ಆದರೆ ಈ ವಿಜ್ಞಾನಯುಗದಲ್ಲಿ ಮಾನವನಿಗೆ ಜೀವನ ಸಮಸ್ಯೆಯೇ ಕಠಿನವಾಗಿದ್ದು ಉಳಿದ ವಿಚಾರಗಳಿಗೆ ಬಿಡುವಿಲ್ಲವಾಗಿರು ವದು ನಿಜ. ಆದರೂ ಖಾಯಿಲೆಯು ಬಂದಾಗ ಎಲ್ಲಾ ಕೆಲಸಗಳನ್ನೂ ಬಿಟ್ಟು ಔಷಧಿಯನ್ನೂ ವಿಶ್ರಾಂತಿಯನ್ನೂ ಸೇವಿಸುವಂತೆ ಕಾಮವೆಂಬ ರೋಗಪರಿಹಾರಕ್ಕೆ ಅಧ್ಯಾತ್ಮವಿದ್ಯೆಯ ಸಾರವನ್ನಾದರೂ ಪ್ರತಿದಿನವೂ

ಕೆಲವು ನಿಮಿಷಕಾಲವಾದರೂ ಮನನಮಾಡಲೇಬೇಕಾಗಿದೆ. ಇಂಥ ಮನನೀಯವಾದ ಸರ್ವಸಮ್ಮತವಾದ ವೇದಾಂತೋಪದೇಶಗಳುಳ್ಳ ಗ್ರಂಥವೆಂದರೆ **ಭಗವದ್ಗೀತೆ.** ಇದು ನಮ್ಮ ದೇಶದಲ್ಲಷ್ಟೇ ಅಲ್ಲದೆ ಪರದೇಶಗಳಲ್ಲಿಯೂ ಹರಡಿದ್ದು ಜಗತ್ತಿನ ಎಲ್ಲಾ ನಾಗರಿಕಜನಾಂಗದ ಭಾಷೆಗಳಲ್ಲೂ ಪರಿವರ್ತಿತವಾಗಿ ತನ್ನ ಸ್ವಪ್ರತಿಭೆಯಿಂದಲೇ ಸರ್ವತ್ರವೂ ಸುಪ್ರಸಿದ್ಧವಾಗಿದೆ. ಆದ್ದರಿಂದ ಭಾರತೀಯನಾದವನು ತನ್ನ ಗೌರವ ವನ್ನುಳಿಸಿಕೊಳ್ಳಲು ಕನಿಷ್ಠವಾಗಿ ಭಗವದ್ಗೀತೆಯನ್ನಾದರೂ ಓದಬೇಕು. ಇದು ಎಲ್ಲಾ ವರ್ಗದ ಜನರಿಗೂ ಹೊಂದುವ ಉಪದೇಶಗಳುಳ್ಳ ದ್ದಾಗಿದೆ. ಆದ್ದರಿಂದ ಈ ಗೀತೆಯನ್ನು ಈಗಿನ ಕಾಲಕ್ಕೆ ತಕ್ಕಂತೆ ಮತ್ತಷ್ಟು ಸಂಕ್ಷೇಪಿಸಿ ಸಾರಭೂತವಾದ ಕೆಲವು ಪದ್ಯಗಳನ್ನು ಮಾತ್ರ ಅರ್ಥಸಮೇತ ವಾಗಿ ಇಲ್ಲಿ ವಿವರಿಸಿದೆ. ಗೀತೆಯು ಸುಪ್ರಸಿದ್ಧವಾದ ಇತಿಹಾಸಗ್ರಂಥವಾದ ಮಹಾಭಾರತದಲ್ಲಿದೆ. ಆದ್ದರಿಂದ ಅದರ ಸೂಕ್ಷ್ಮಪರಿಚಯದೊಡನೆ ಮುಂದುವರೆಯೋಣ.

**ಮಹಾಭಾರತವು** ನಮ್ಮ ದೇಶದ ಪವಿತ್ರವಾದ ಇತಿಹಾಸಗ್ರಂಥ. ಇದು ಸಂಸ್ಕೃತಭಾಷೆಯಲ್ಲಿದೆ. ಇದನ್ನು ಬರೆದವರು **ವೇದವ್ಯಾಸ ಮಹರ್ಷಿ**ಗಳು. ದ್ವಾಪರಯುಗದಲ್ಲಿ ನಡೆದ ಈ ಇತಿಹಾಸದಲ್ಲಿ ಧರ್ಮಾ ಧರ್ಮಗಳ ಘರ್ಷಣೆಯನ್ನು ಕೌರವಪಾಂಡವರ ಕಥೆಯ ಮೂಲಕ ಪ್ರಸ್ತಾಪಿಸಿ ಕೊನೆಯಲ್ಲಿ ಧರ್ಮಕ್ಕೇ ಜಯವಾಯಿತೆಂಬುದನ್ನು ವ್ಯಾಸರು ಸ್ವಾರಸ್ಯವಾಗಿ ಇಲ್ಲಿ ನಿರೂಪಿಸಿದ್ದಾರೆ. ಮಹಾಭಾರತದ ಸೂತ್ರಧಾರಿ ಶ್ರೀಕೃಷ್ಣನು ಧರ್ಮಪಕ್ಷಪಾತಿಗಳಾದ ಪಾಂಡವರಿಗೆ ಬೆಂಬಲವಾಗಿ ನಿಂತು ಜಯವನ್ನು ಕೊಡಿಸಿದನು. ಪಾಂಡವರಲ್ಲಿ ಮಧ್ಯಮನಾದ ಅರ್ಜುನನು ಶ್ರೀಕೃಷ್ಣನ ಸ್ನೇಹಿತನು. ಈತನು ಕೃಷ್ಣನನ್ನೇ ತನ್ನ ಸಾರಥಿಯನ್ನಾಗಿ ಮಾಡಿಕೊಂಡು ಕೌರವರ ಸಂಗಡ ಯುದ್ಧಕ್ಕೆ ಹೊರಟನು. ಕೌರವ ಪಾಂಡವರು ಅಣ್ಣತಮ್ಮಂದಿರುಗಳಾದರೂ ಕೌರವರಲ್ಲಿ ಹಿರಿಯನಾದ ದುರ್ಯೋಧನನ ಹಟದಿಂದ ಪಾಂಡವರಿಗೆ ರಾಜ್ಯವು ದೊರಕದೆ ಕೃಷ್ಣನ ಸಂಧಾನವೂ ಮುರಿದುಬಿದ್ದಾಗ ಯುದ್ಧವು ಅನಿವಾರ್ಯವಾಯಿತು.

ಪಾಂಡವರ ಕಡೆ ಏಳು , ಕೌರವರ ಕಡೆ ಹನ್ನೊಂದು - ಹೀಗೆ ಹದಿನೆಂಟು ಅಕ್ಷೋಹಿಣೀ ಸೈನ್ಯವು ಕುರುಕ್ಷೇತ್ರದಲ್ಲಿ ಯುದ್ಧಕ್ಕೆ ಸಿದ್ಧವಾಯಿತು. ಇಲ್ಲಿ ನಡೆದ ಕಥೆಯನ್ನೆಲ್ಲ **ಧೃತರಾಷ್ಟ್ರನಿಗೆ** ಸಂಜಯನು ಹೇಳುತ್ತಾ ಬಂದನು. ಯುದ್ಧದ ಆರಂಭದಲ್ಲಿ ನಡೆದ ಕೃಷ್ಣಾರ್ಜುನರ ಸಂವಾದವೇ **ಭಗವದ್ಗೀತೆ**ಯೆಂದು ಪ್ರಸಿದ್ಧವಾಗಿದೆ. ಇದು ಇಡೀ ಮಹಾಭಾರತ ಗ್ರಂಥದ ಹೃದಯದಂತಿದೆ. ಅಧ್ಯಾತ್ಮವಿದ್ಯೆಯ ಸಾರವನ್ನೆಲ್ಲ ಒಳಗೊಂಡು ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳಿಗೆ ಉಪಾಯವನ್ನೂ ಪರಮಪುರುಷಾರ್ಥವಾದ ಮೋಕ್ಷಕ್ಕೆ ಕಾರಣವಾದ ತತ್ತ್ವಜ್ಞಾನದ ಉಪದೇಶವನ್ನೂ ಇದು ಒಳಗೊಂಡಿದೆ. ಇದರಲ್ಲಿ ಹದಿನೆಂಟು ಅಧ್ಯಾಯ ಗಳೂ, ಏಳುನೂರು ಶ್ಲೋಕಗಳೂ ಇವೆ. ಪಾಠಕರ ಸೌಕರ್ಯಕ್ಕಾಗಿ ಕೆಲವು ಮುಖ್ಯಶ್ಲೋಕಗಳನ್ನೂ ಅವುಗಳ ಅರ್ಥವನ್ನೂ ಇಲ್ಲಿ ಕೊಡಲಾಗುವದು.

ಯುದ್ಧಾರಂಭದ ಕಥೆಯನ್ನು ಕುರಿತು ಧೃತರಾಷ್ಟ್ರನು ಸಂಜಯ ನನ್ನು ಹೀಗೆ ಪ್ರಶ್ನಿಸಿದನು. ಇದೇ ಭಗವದ್ಗೀತೆಯ ಪ್ರಥಮ ಪದ್ಯವಾಗಿದೆ.

**ಓಂ॥ ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।**
**ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥ ೧-೧**

ಸಂಜಯ - ಎಲೈ ಸಂಜಯನೆ, ಧರ್ಮಕ್ಷೇತ್ರೇ - ಧರ್ಮಕ್ಷೇತ್ರ ವಾದ , ಕುರುಕ್ಷೇತ್ರೇ-ಕುರುಕ್ಷೇತ್ರದಲ್ಲಿ, ಯುಯುತ್ಸವಃ-ಯುದ್ಧಮಾಡುವ ಇಚ್ಛೆ ಯಿಂದ, ಸಮವೇತಾಃ - ಕೂಡಿದಂಥ, ಮಾಮಕಾಃ- ನನ್ನವರಾದ ಕೌರವರೂ, ಪಾಂಡವಾಶ್ಚ - ಪಾಂಡವರೂ, ಕಿಂ - ಏನನ್ನು, ಅಕುರ್ವತ - ಮಾಡಿದರು ?

ಹೀಗೆಂದು ಧೃತರಾಷ್ಟ್ರನು ಕೇಳಿದ್ದಕ್ಕೆ ಸಂಜಯನು '' ರಾಜನೆ, ಕೇಳು; ಯುದ್ಧಭೂಮಿಯಲ್ಲಿ ಸೇರಿದ ಕೌರವಪಾಂಡವರು ವ್ಯೂಹವನ್ನು ರಚಿಸಿಕೊಂಡು ಯುದ್ಧಾರಂಭವನ್ನು ಸೂಚಿಸುವದಕ್ಕಾಗಿ ಶಂಖಧ್ವನಿ ಯನ್ನು ಮಾಡಿದರು. ಅರ್ಜುನನು ಕೃಷ್ಣನನ್ನು ಸಾರಥಿಯನ್ನಾಗಿ ಮಾಡಿ ಕೊಂಡು ರಥಾರೂಢನಾಗಿ ಯುದ್ಧಭೂಮಿಗೆ ಬಂದು ಶತ್ರುಪಕ್ಷದಲ್ಲಿದ್ದ ತನ್ನವರಾದ ಬಂಧುಬಾಂಧವರನ್ನೂ ಗುರುಗಳನ್ನೂ ನೋಡಿದನು.

ಕೂಡಲೆ ಅವನಿಗೆ 'ಯುದ್ಧದಲ್ಲಿ ಇವರನ್ನೆಲ್ಲ ಕೊಲ್ಲಬೇಕಾಯಿತಲ್ಲ !' - ಎಂದು ಮರುಕವುಂಟಾಯಿತು. ಆಗ ಕೃಷ್ಣನನ್ನು ಕುರಿತು :

**ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಮ್ ।**
**ಸೀದನ್ತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ ॥ ೧-೨೮**

ಕೃಷ್ಣ- ಎಲೈ ಕೃಷ್ಣನೆ, ಯುಯುತ್ಸುಂ - ಯುದ್ಧಮಾಡುವ ಇಚ್ಛೆಯಿಂದ, ಸಮುಪಸ್ಥಿತಂ - ಬಂದು ಸೇರಿರುವ, ಇಮಂ-ಈ, ಸ್ವಜನಂ- ನಮ್ಮವರನ್ನು, ದೃಷ್ಟ್ವಾ- ನೋಡಿ, ಮಮ-ನನ್ನ, ಗಾತ್ರಾಣಿ - ಶರೀರಾವಯವಗಳು, ಸೀದನ್ತಿ - ಕುಸಿಯುತ್ತಿವೆ, ಮುಖಂ ಚ - ಮುಖವೂ ಕೂಡ, ಪರಿಶುಷ್ಯತಿ - ಒಣಗುತ್ತಿದೆ.

ಹೀಗೆನ್ನುತ್ತಾ ಅರ್ಜುನನು ಗಾಂಡೀವಧನಸ್ಸನ್ನು ಕೆಳಗಿಟ್ಟು ಯುದ್ಧ ಮಾಡುವದಿಲ್ಲವೆಂದು ಹಟಹಿಡಿದು ಅಳುತ್ತಾ ಕುಳಿತನು. ಆಗ ಕೃಷ್ಣನು ಸ್ವಲ್ಪ ಧೈರ್ಯವನ್ನು ತುಂಬಿದನು. ಆದರೂ ಅರ್ಜುನನಿಗೆ ತಾನು ಯುದ್ಧ ಮಾಡುವದು ಸರಿಯೊ, ತಪ್ಪೊ - ಎಂಬ ಸಂಶಯವಾಗಿ ಕೃಷ್ಣನನ್ನು ಗುರು ವಾಗಬೇಕೆಂದೂ ತನಗೆ ಹಿತವಾದದ್ದನ್ನು ಉಪದೇಶಿಸಬೇಕೆಂದೂ ಬೇಡಿ ಕೊಂಡನು. ಅರ್ಜುನನಿಗೆ ಉಂಟಾಗಿದ್ದ **ಶೋಕ**ವನ್ನು ಕಳೆಯಲು **ಅಧ್ಯಾತ್ಮ ಜ್ಞಾನ**ವೊಂದೇ ಮದ್ದು-ಎಂದು ಭಾವಿಸಿ, ಕೃಷ್ಣನು ಲೋಕಾನುಗ್ರಹಾರ್ಥ ವಾಗಿ ಅರ್ಜುನನನ್ನು ನಿಮಿತ್ತಮಾಡಿಕೊಂಡು ಉಪದೇಶಮಾಡಿದ್ದೇ ನೆಂದರೆ :

**ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।**
**ಗತಾಸೂನಗತಾಸೂಂಶ್ಚ ನಾನುಶೋಚನ್ತಿ ಪಂಡಿತಾಃ ॥ ೨-೧೧**

ತ್ವಂ-ನೀನು, ಅಶೋಚ್ಯಾನ್-ಶೋಕಕ್ಕೆ ತಕ್ಕವರಲ್ಲದವರನ್ನು ಕುರಿತು, ಅನ್ವಶೋಚಃ - ದುಃಖಿಸುತ್ತಿರುವೆ, ಪ್ರಜ್ಞಾವಾದಾಂಶ್ಚ-ಜಾಣರ ಮಾತುಗಳನ್ನೂ, ಭಾಷಸೇ-ಆಡುತ್ತಿರುವೆ. ಪಂಡಿತಾಃ-ಆತ್ಮಜ್ಞಾನಿಗಳು, ಗತಾಸೂನ್-ಸತ್ತು ಹೋದವರ ವಿಷಯದಲ್ಲಾಗಲಿ, ಅಗತಾಸೂಂಶ್ಚ-ಬದುಕಿರುವವರ ವಿಷಯ ದಲ್ಲಾಗಲಿ, ನಾನುಶೋಚನ್ತಿ -ಎಂದಿಗೂ ದುಃಖಿಸುವದಿಲ್ಲ.

ಆದ್ದರಿಂದ ಯುದ್ಧದಲ್ಲಿ ನೀನು ಭೀಷ್ಮಾದಿಗಳನ್ನು ಕೊಲ್ಲುವವನೂ ಅಲ್ಲ ; ಅವರು ಕೊಲ್ಲಲ್ಪಡುವವರೂ ಅಲ್ಲ. ಅವರೆಲ್ಲ ಆತ್ಮರೂಪದಿಂದ ನಿತ್ಯರು. ಎಲ್ಲರ ಆತ್ಮವಾಗಿರುವ ಬ್ರಹ್ಮತತ್ತ್ವವು ಅವಿನಾಶಿ. ಅದನ್ನು ತಿಳಿದವರೇ ಜಾಣರು. ದೇಹವು ನಾಶವಾದರೂ ಆತ್ಮನಿಗೆ ನಾಶವಿಲ್ಲ. ಹೇಗೆಂದರೆ:

**ವಾಸಾಂಸಿ ಜೀರ್ಣಾನಿ ಯಥಾ ವಿಹಾಯ**
**ನವಾನಿ ಗೃಹ್ಣಾತಿ ನರೋಽಪರಾಣಿ ।**
**ತಥಾ ಶರೀರಾಣಿ ವಿಹಾಯ ಜೀರ್ಣಾ-**
**ನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥ ೨-೨೨**

ಯಥಾ-ಹೇಗೆ, ನರಃ-ಮನುಷ್ಯನು, ಜೀರ್ಣಾನಿ-ಹರಿದುಹೋದ, ವಾಸಾಂಸಿ - ಬಟ್ಟೆಗಳನ್ನು, ವಿಹಾಯ - ಬಿಟ್ಟು, ಅಪರಾಣಿ-ಬೇರೆಯ, ನವಾನಿ - ಹೊಸದಾದವುಗಳನ್ನು, ಗೃಹ್ಣಾತಿ - ಸ್ವೀಕರಿಸುತ್ತಾನೋ, ತಥಾ - ಹಾಗೆಯೇ, ದೇಹೀ-ಆತ್ಮನು, ಜೀರ್ಣಾನಿ -ಮುಪ್ಪಾದ, ಶರೀರಾಣಿ- ಶರೀರಗಳನ್ನು, ವಿಹಾಯ-ಬಿಟ್ಟು, ಅನ್ಯಾನಿ- ಬೇರೆಯ, ನವಾನಿ- ಹೊಸಶರೀರಗಳನ್ನು, ಸಂಯಾತಿ -ಹೊಂದುವನು.

ಒಂದುವೇಳೆ ಲೌಕಿಕದೃಷ್ಟಿಯಿಂದ ಆತ್ಮನು ಅನಿತ್ಯನೆಂದು ಭಾವಿಸಿ ನೋಡಿದರೂ ನೀನು ಶೋಕಪಡಬೇಕಾಗಿಲ್ಲ. ಮತ್ತು ಕ್ಷತ್ರಿಯನಾದ ನಿನಗೆ ಅಪಕೀರ್ತಿಯುಂಟಾದರೆ ಅದು ಮರಣಕ್ಕಿಂತಲೂ ಕೀಳಾದೀತು. ನೀನು ಯುದ್ಧಕ್ಕೆ ಹೆದರಿದ್ದೀಯೆಂದೇ ಶತ್ರುಗಳು ಭಾವಿಸುತ್ತಾರೆ. ಆದ್ದರಿಂದ ಈಗ ನೀನು ಅವರಲ್ಲಿ ದಯೆಯನ್ನು ತೋರಿಸಬೇಡ. ಯುದ್ಧಕ್ಕೆ ಹಿಂಜರಿಯಲೂ ಬೇಡ. ಏಕೆಂದರೆ :

**ಜಾತಸ್ಯ ಹಿ ಧ್ರುವೋ ೀ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ ।**
**ತಸ್ಮಾದಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ ॥ ೨-೨೭**
**ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಮ್ ।**
**ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ ॥ ೨-೩೭**

ಜಾತಸ್ಯ-ಹುಟ್ಟಿದವನಿಗೆ, ಮೃತ್ಯುಃ- ಮರಣವು, ಧ್ರುವೋ ಹಿ- ನಿಶ್ಚಯವು, ಮೃತಸ್ಯ-ಸತ್ತುಹೋದವನಿಗೆ, ಜನ್ಮ - ಹುಟ್ಟುವಿಕೆಯು, ಧ್ರುವಮ್- ಖಂಡಿತವು. ತಸ್ಮಾತ್-ಆದ್ದರಿಂದ, ಅಪರಿಹಾರ್ಯೇ-ತಪ್ಪಿಸಿಕೊಳ್ಳಲಾಗದ, ಅರ್ಥೇ-ವಿಷಯದಲ್ಲಿ, ತ್ವಂ-ನೀನು, ಶೋಚಿತುಂ-ಶೋಕಪಡುವದಕ್ಕೆ, ನಾರ್ಹಸಿ-ಅರ್ಹನಾಗಿಲ್ಲ.

ಕೌಂತೇಯ-ಎಲೈ ಕುಂತೀಪುತ್ರನೆ, ಹತೋ ವಾ-ಯುದ್ಧದಲ್ಲಿ ಸತ್ತರೆ, ಸ್ವರ್ಗಂ-ಸ್ವರ್ಗವನ್ನು, ಪ್ರಾಪ್ಸ್ಯಸಿ-ಪಡೆಯುವೆ. ಜಿತ್ವಾ ವಾ- ಗೆದ್ದರೆ, ಮಹೀಂ- ಭೂಮಿಯನ್ನು, ಭೋಕ್ಷ್ಯಸೇ-ಅನುಭವಿಸುತ್ತೀಯೆ. ತಸ್ಮಾತ್-ಆದ್ದರಿಂದ, ಯುದ್ಧಾಯ-ಯುದ್ಧಕ್ಕಾಗಿ, ಕೃತನಿಶ್ಚಯಃ- ನಿಶ್ಚಯವನ್ನು ಮಾಡಿದವನಾಗಿ, ಉತ್ತಿಷ್ಠ-ಮೇಲೇಳು.

ಆತ್ಮನು ಎಲ್ಲರಲ್ಲಿಯೂ ಇದ್ದರೂ ಯಾರೊಬ್ಬರೂ ಸರಿಯಾಗಿ ತಿಳಿಯರು. ಏಕೆಂದರೆ ಅದು ತುಂಬ ಗೂಢವಾಗಿದೆ. ಒಮ್ಮೆಗೇ ನೀನು ಈ ತತ್ತ್ವವನ್ನು ತಿಳಿಯಲಾರೆ. ಆದ್ದರಿಂದ ನನ್ನ ಮಾತನ್ನು ನಂಬಿ ನಾನು ಹೇಳುವಂತೆ ಮಾಡು. ಹೇಗೆಂದರೆ :

**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।**
**ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥**
**೨-೪೭**

ತೇ-ನಿನಗೆ, ಕರ್ಮಣ್ಯೇವ-ಕೆಲಸಮಾಡುವದರಲ್ಲಿ ಮಾತ್ರವೇ, ಅಧಿಕಾರಃ-ಅರ್ಹತೆಯು. ಕದಾಚನ-ಯಾವಾಗಲೂ, ಫಲೇಷು-ಕರ್ಮಫಲದ ಬಗ್ಗೆ, ಮಾ-ಇಲ್ಲವು. ಹೀಗೆಯೇ, ಕರ್ಮಫಲಹೇತುಃ-ಕರ್ಮಫಲಕ್ಕೆ ಕಾರಣನಾಗಿ, ಮಾ ಭೂಃ-ಆಗಬೇಡ. ಹಾಗೆಂದು, ಅಕರ್ಮಣಿ- ಕರ್ಮತ್ಯಾಗದಲ್ಲಿಯೂ, ತೇ-ನಿನಗೆ, ಸಂಗಃ-ಆಶೆಯು, ಮಾಸ್ತು- ಆಗದಿರಲಿ.

ಕರ್ಮಫಲದಲ್ಲಿ ಬಯಕೆಯನ್ನು ಬಿಡುವದಾದರೆ ಕರ್ಮವನ್ನು ಏಕೆ ಮಾಡಬೇಕು ? ಬರೀ ಆಯಾಸಮಾತ್ರವಾಗಿರುವ ಈ ಕರ್ಮವೇ ಬೇಡ - ಎನ್ನಬಾರದು. ಏಕೆಂದರೆ ಬದುಕಿರುವವರೆಗ ಕರ್ಮವನ್ನು ಬಿಡುವದೂ ಸಾಧ್ಯವಿಲ್ಲ. ಆದ್ದರಿಂದ ಹೇಗೆ ಮಾಡಬೇಕು ? - ಎಂದರೆ :

**ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।**
**ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ॥೨-೪೮**

ಧನಂಜಯ-ಎಲೈ ಅರ್ಜುನನೆ, ಯೋಗಸ್ಥಃ- ಸಮತ್ವಬುದ್ಧಿಯಿಂದ ಕೂಡಿದವನಾಗಿ, ಸಂಗಂ-ಆಸಕ್ತಿಯನ್ನು, ತ್ಯಕ್ತ್ವಾ-ಬಿಟ್ಟು, ಸಿದ್ಧ್ಯಸಿದ್ಧ್ಯೋಃ-ಫಲಾಫಲಗಳಲ್ಲಿ, ಸಮಃ-ಸಮವಾದ ಮನಸ್ಸುಳ್ಳವನು, ಭೂತ್ವಾ- ಆಗಿ, ಕರ್ಮಾಣಿ-ಕರ್ಮಗಳನ್ನು, ಕುರು-ಮಾಡು. ಸಮತ್ವಂ- ಸಮತ್ವವು, ಯೋಗಃ-ಯೋಗವೆಂದು, ಉಚ್ಯತೇ-ಕರೆಯಲ್ಪಡುತ್ತದೆ.

ಹೀಗೆ ಸಮಬುದ್ಧಿಯಿಂದ ಈಶ್ವರಪ್ರೀತಿಗಾಗಿ ಕರ್ಮವನ್ನು ಮಾಡುತ್ತಿದ್ದರೆ ಸಂಸಾರದಿಂದ ಬಿಡುಗಡೆಯಾಗುವದು. ಜ್ಞಾನಿಗಳಾದವರು ಹೀಗೆಯೇ ಮಾಡಿಕೊಂಡಿರುತ್ತಾರೆ. ಅವರು ಸ್ಥಿತಪ್ರಜ್ಞರಾಗಿರುತ್ತಾರೆ. ಅವರು ಹೇಗಿರುವರೆಂದರೆ :

**ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್ ।**
**ಆತ್ಮನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥ ೨-೫೫**
**ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।**
**ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥ ೨-೫೬**

ಪಾರ್ಥ-ಎಲೈ ಅರ್ಜುನನೆ, ಯದಾ-ಯಾವಾಗ, ಮನೋಗತಾನ್-ಮನಸ್ಸಿನಲ್ಲಿರುವ, ಸರ್ವಾನ್-ಎಲ್ಲಾ, ಕಾಮಾನ್- ಕಾಮಗಳನ್ನೂ, ಪ್ರಜಹಾತಿ-ಬಿಡುತ್ತಾನೋ, ಮತ್ತು ಆತ್ಮನ್ಯೇವ-ತನ್ನಲ್ಲಿಯೇ, ಆತ್ಮನಾ-ತನ್ನಿಂದಲೇ, ತುಷ್ಟಃ-ತೃಪ್ತನಾಗುವನೋ, ತದಾ-ಆಗ, ಸ್ಥಿತಪ್ರಜ್ಞಃ-ಸ್ಥಿತಪ್ರಜ್ಞನೆಂದು, ಉಚ್ಯತೇ-ಹೇಳಲ್ಪಡುತ್ತಾನೆ.

ದುಃಖೇಷು-ದುಃಖಗಳಲ್ಲಿ, ಅನುದ್ವಿಗ್ನಮನಾಃ-ತಳಮಳಗೊಳ್ಳದ ಮನಸ್ಸುಳ್ಳವನಾಗಿ, ಸುಖೇಷು-ಸುಖಗಳಲ್ಲಿ, ವಿಗತಸ್ಪೃಹಃ-ಆಶೆಯಿಲ್ಲದವನಾಗಿ, ವೀತರಾಗಭಯಕ್ರೋಧಃ-ಆಶೆ, ಅಂಜಿಕೆ, ಕೋಪ ಇವುಗಳಿಂದ ಬಿಡಲ್ಪಟ್ಟವನಾದ, ಸ್ಥಿತಧೀಃ-ಸ್ಥಿತಪ್ರಜ್ಞನು, ಮುನಿಃ-ಜ್ಞಾನಿಯೆಂದು, ಉಚ್ಯತೇ - ಹೇಳಲ್ಪಡುತ್ತಾನೆ.

ಆದರೆ ಮನುಷ್ಯನು ಸ್ವಭಾವದಿಂದಲೇ ಸ್ಥಿತಪ್ರಜ್ಞನಾಗದೆ ಇರಲು ಕಾರಣವೇನು ? ಎಂದರೆ, ವಿಷಯಗಳ ಚಿಂತನೆಯೇ ಇದಕ್ಕೆ ಅಡ್ಡಿಯಾಗಿದೆ. ಇದರಿಂದ ಬುದ್ಧಿ ವಿನಾಶವೂ ಆಗುವದು. ಹೇಗೆಂದರೆ :

**ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ ।**
**ಸಂಗಾತ್ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ॥**

**ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ ।**
**ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥ ೨-೬೩**

ವಿಷಯಾನ್-ಹೊರಗಿನ ವಸ್ತುಗಳನ್ನು, ಧ್ಯಾಯತಃ-ಚಿಂತಿಸುವ, ಪುಂಸಃ-ಮನುಷ್ಯನಿಗೆ, ತೇಷು-ಅವುಗಳಲ್ಲಿ, ಸಂಗಃ-ಆಸಕ್ತಿಯು, ಉಪಜಾಯತೇ-ಉಂಟಾಗುತ್ತದೆ. ಸಂಗಾತ್-ಆಸಕ್ತಿಯಿಂದ, ಕಾಮಃ- ಬಯಕೆಯು, ಸಂಜಾಯತೇ-ಉಂಟಾಗುತ್ತದೆ. ಕಾಮಾತ್- ಬಯಕೆಯು (ನೆರವೇರದಿದ್ದರೆ) ಅದರಿಂದ, ಕ್ರೋಧಃ-ಕೋಪವು, ಅಭಿಜಾಯತೇ-ಉಂಟಾಗುತ್ತದೆ. ಕ್ರೋಧಾತ್-ಕೋಪದಿಂದ, ಸಂಮೋಹಃ-ಅವಿವೇಕವು, ಭವತಿ-ಉಂಟಾಗುತ್ತದೆ. ಸಂಮೋಹಾತ್- ಅವಿವೇಕದಿಂದ, ಸ್ಮೃತಿವಿಭ್ರಮಃ-ವಿವೇಕರೂಪವಾದ ಸ್ಮೃತಿಯ ನಾಶವೂ, ಸ್ಮೃತಿಭ್ರಂಶಾತ್- ಸ್ಮೃತಿಯು ತಪ್ಪುವದರಿಂದ, ಬುದ್ಧಿನಾಶಃ- ಕಾರ್ಯಾಕಾರ್ಯವಿವೇಚನಾರೂಪವಾದ ಬುದ್ಧಿಯ ನಾಶವೂ ಉಂಟಾಗಿ, ಬುದ್ಧಿನಾಶಾತ್-ಬುದ್ಧಿನಾಶದಿಂದ, ಪ್ರಣಶ್ಯತಿ-ಹಾಳಾಗುತ್ತಾನೆ.

ಆದ್ದರಿಂದ ಪ್ರಾರಂಭದಲ್ಲಿ ಕರ್ಮಯೋಗವನ್ನು ಮಾಡುತ್ತಾ ಇದ್ದರೆ ಚಿತ್ತಶುದ್ಧಿಯುಂಟಾಗಿ ಮನಶ್ಶಾಂತಿಯು ದೊರಕುವದು. ಹೇಗೆಂದರೆ :

**ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ ।**
**ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ ॥ ೨-೭೧**

ಯಃ-ಯಾವ, ಪುಮಾನ್-ಮನುಷ್ಯನು, ಸರ್ವಾನ್-ಎಲ್ಲಾ, ಕಾಮಾನ್-ಬಯಕೆಗಳನ್ನೂ, ವಿಹಾಯ-ಬಿಟ್ಟು, ನಿಸ್ಪೃಹಃ-ಆಶೆಯಿಲ್ಲದವನಾಗಿ, ನಿರ್ಮಮಃ-

ನನ್ನದೆಂಬುದಿಲ್ಲದವನಾಗಿ, ನಿರಹಂಕಾರಃ- ಅಹಂಕಾರವೂ ಇಲ್ಲದವನಾಗಿ, ಚರತಿ-ಇದ್ದುಕೊಂಡಿರುವನೋ, ಸಃ-ಅವನು, ಶಾಂತಿಂ-ಶಾಂತಿಯನ್ನು, ಅಧಿಗಚ್ಛತಿ-ಹೊಂದುವನು.

ಆದರೆ ಅನೇಕರು ಕರ್ಮವನ್ನು ಬಿಡುವದೇ ಸುಲಭ-ಎಂದು ಭಾವಿಸಿ ಬೇಗನೆ ವೇದಾಂತಿಗಳಾಗಲು ಬಯಸಿ ಸೋಮಾರಿಗಳಾಗುತ್ತಾರೆ. ಇದಿರಂದ ಏನೂ ಪ್ರಯೋಜನವಿಲ್ಲ. ಮನಸ್ಸಿನಲ್ಲಿ ಆಶೆಯನ್ನು ಇಟ್ಟುಕೊಂಡು ಹೊರಗೆ ಮಾತ್ರ ಕೈಕಾಲುಗಳನ್ನಾಡಿಸದೆ ಕುಳಿತಿದ್ದರೆ ಅಂಥವನು ಎಂದಿಗೂ ಉದ್ಧಾರವಾಗಲಾರನು. ಹೇಗೆಂದರೆ :

**ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್ ।**
**ಇಂದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ ॥ ೩-೬**

ಯಃ-ಯಾವನು, ಕರ್ಮೇಂದ್ರಿಯಾಣಿ-ಹೊರಗಿನ ಕೈಕಾಲುಗಳೇ ಮುಂತಾದ ಕರ್ಮೇಂದ್ರಿಯಗಳನ್ನು ಸಂಯಮ್ಯ -ಬಿಗಿದುಕೊಂಡು, ಮನಸಾ-ಮನಸ್ಸಿನಿಂದ, ಇಂದ್ರಿಯಾರ್ಥಾನ್- ವಿಷಯಗಳನ್ನು, ಸ್ಮರನ್-ನೆನೆಸಿಕೊಳ್ಳುತ್ತಾ, ಆಸ್ತೇ-ಇರುವನೋ, ಸಃ- ಇಂಥ, ವಿಮೂಢಾತ್ಮಾ-ದಡ್ಡನಾದ ಮನುಷ್ಯನು, ಮಿಥ್ಯಾಚಾರಃ-ಸುಳ್ಳು (ಕಪಟ) ನಡತೆಯವನೆಂದು ಉಚ್ಯತೇ-ಕರೆಯಲ್ಪಡುತ್ತಾನೆ.

ಆದ್ದರಿಂದ ನಿನಗೆ ಕರ್ಮತ್ಯಾಗಕ್ಕಿಂತ ಕರ್ಮವನ್ನು ಮಾಡುವದೇ ಶ್ರೇಯಸ್ಕರವು. ಇದರಿಂದ ಚಿತ್ತಶುದ್ಧಿಯೂ, ಮುಂದೆ ಜ್ಞಾನಕ್ಕೆ ತಕ್ಕ ಯೋಗ್ಯತೆಯೂ ಬರಲಿದೆ. ಹಾಗಿಲ್ಲದೆ ಸುಮ್ಮನೆ ಕುಳಿತರೆ ಏನೂ ಸಿದ್ಧಿಸುವದಿಲ್ಲ. ಆದ್ದರಿಂದ :

**ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ ।**
**ಶರೀರಯಾತ್ರಾಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ ॥ ೩-೮**

ತ್ವಂ-ನೀನು, ನಿಯತಂ-ಶಾಸ್ತ್ರದಲ್ಲಿ ಹೇಳಿರುವ, ಕರ್ಮ-ಕರ್ಮವನ್ನು, ಕುರು-ಮಾಡು. ಅಕರ್ಮಣಃ-ಏನೂ ಮಾಡದಿರುವದಕ್ಕಿಂತ, ಕರ್ಮ-ನಿತ್ಯ ಕರ್ಮವು, ಜ್ಯಾಯಃ-ಹೆಚ್ಚಿನದು. ತೇ-ನಿನಗೆ, ಅಕರ್ಮಣಃ -ಮಾಡಬೇಕಾದ್ದನ್ನು

ಮಾಡದಿರುವದರಿಂದ, ಶರೀರಯಾತ್ರಾಪಿ ಚ - ಶರೀರದ ಪಾಲನೆಯು ಕೂಡ (ಜೀವನಯಾತ್ರೆಯು ಕೂಡ) ನ ಪ್ರಸಿದ್ಧ್ಯೇತ್-ಸಿದ್ಧಿಸಲಾರದು.

ಇಷ್ಟೇ ಅಲ್ಲ. ಜಗತ್ತಿನ ಸ್ಥಿತಿಗತಿಗಳೆಲ್ಲವೂ ಕರ್ಮಾಧೀನವಾಗಿಯೇ ಇವೆ. ಹೇಗೆಂದರೆ :

**ಅನ್ನಾದ್ಭವನ್ತಿ ಭೂತಾನಿ ಪರ್ಜನ್ಯಾದನ್ನಸಂಭವಃ ।**
**ಯಜ್ಞಾದ್ಭವತಿ ಪರ್ಜನ್ಯಃ ಯಜ್ಞಃ ಕರ್ಮಸಮುದ್ಭವಃ ॥ ೩-೧೪**

ಭೂತಾನಿ-ಪ್ರಾಣಿಗಳು, ಅನ್ನಾದ್-ಅನ್ನದಿಂದ, ಭವನ್ತಿ- 'ಉಂಟಾಗುತ್ತವೆ.' ಪರ್ಜನ್ಯಾದ್-ಮಳೆಯಿಂದ, ಅನ್ನಸಂಭವಃ-ಅನ್ನವುಂಟಾಗುವದು. ಪರ್ಜನ್ಯಃ- ಮಳೆಯು, ಯಜ್ಞಾದ್-ಯಜ್ಞದಿಂದ, ಭವತಿ-ಆಗುತ್ತದೆ. ಯಜ್ಞಃ-ಯಜ್ಞವು, ಕರ್ಮಸಮುದ್ಭವಃ-ವೈದಿಕಕರ್ಮಗಳಿಂದಾಗುತ್ತದೆ.
ಹೀಗಿರುವದರಿಂದ :

**ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ ।**
**ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ ॥ ೩-೧೯**

ತಸ್ಮಾತ್-ಆದ್ದರಿಂದ, ಸತತಂ-ಯಾವಾಗಲೂ, ಅಸಕ್ತಃ-ಫಲದ ಅಂಟಿಲ್ಲದವನಾಗಿ, ಕಾರ್ಯಂ ಕರ್ಮ-ಮಾಡಬೇಕಾದ ಕೆಲಸವನ್ನು, ಸಮಾಚರ-ಮಾಡು. ಪುರುಷಃ-ಮನುಷ್ಯನು, ಅಸಕ್ತಃ-ಫಲದ ಅಂಟಿಲ್ಲದೆ, ಕರ್ಮ-ಕೆಲಸವನ್ನು, ಆಚರನ್ ಹಿ-ಮಾಡುತ್ತಿದ್ದರೆ, ಪರಂ-ಮೋಕ್ಷವನ್ನು, ಆಪ್ನೋತಿ-ಹೊಂದುವನು.

ಆದ್ದರಿಂದ ಶಾಸ್ತ್ರವಿಹಿತವಾದ ಕರ್ಮಗಳನ್ನು ತಿಳಿದವರು ಮಾಡಲೇಬೇಕು. ಬಲ್ಲವರ ಆಚರಣೆಯೇ ಲೋಕಕ್ಕೆ ಆದರ್ಶವಾಗಿರುತ್ತದೆ. ಹೇಗೆಂದರೆ :

**ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ।**
**ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥ ೩-೨೧**

ಶ್ರೇಷ್ಠಃ-ಉತ್ತಮನಾದವನು, ಯದ್ಯದ್-ಯಾವಯಾವ ಕರ್ಮಗಳನ್ನು, ಆಚರತಿ-ಮಾಡುತ್ತಾನೋ, ಇತರೋ ಜನಃ-ಉಳಿದ ಜನರೂ, ತತ್ತದೇವ-

ಅವುಗಳನ್ನೇ (ಮಾಡುತ್ತಾರೆ). ಸಃ-ಆ ವಿದ್ವಾಂಸನು, ಯತ್- ಯಾವದನ್ನು, ಪ್ರಮಾಣಂ-ಪ್ರಮಾಣವೆಂದು, ಕುರುತೇ-ಮಾಡುವನೋ, ಲೋಕಃ-ಜನವು, ತತ್-ಆದನ್ನು, ಅನುವರ್ತತೇ-ಅನುಸರಿಸುತ್ತದೆ.

ಜನರು ತಮ್ಮ ಇಂದ್ರಿಯಗಳಿಗೆ ಗೋಚರವಾದ ವಸ್ತುಗಳನ್ನೇ ಹೆಚ್ಚಿನವೆಂದು ನಂಬಿ ಅಹಂಕಾರಪಡುತ್ತಾರೆ. ಕೆಲವರು ತಾವೇ ಬುದ್ಧಿವಂತರೆಂದೂ ಭಾವಿಸುತ್ತಾರೆ. ಆದರೆ ಇಂದ್ರಿಯಬುದ್ಧ್ಯಾದಿಗಳಿಗಿಂತಲೂ ಹೆಚ್ಚಿನ ಒಳಗಿನ ತತ್ತ್ವವೊಂದಿದೆ. ಅದನ್ನರಿತರೆ ಮಾತ್ರ ಕಾಮವನ್ನು ಜಯಿಸಬಹುದು. ಹೇಗೆಂದರೆ :

**ಇಂದ್ರಿಯಾಣಿ ಪರಾಣ್ಯಾಹುಃ ಇಂದ್ರಿಯೇಭ್ಯಃ ಪರಂ ಮನಃ ।**
**ಮನಸಸ್ತು ಪರಾ ಬುದ್ಧಿಃ ಯೋ ಬುದ್ಧೇಃ ಪರತಸ್ತು ಸಃ ॥ ೩-೪೨**
**ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।**
**ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್ ॥ ೩-೪೩**

ಇಂದ್ರಿಯಾಣಿ-ಇಂದ್ರಿಯಗಳನ್ನು, ಪರಾಣಿ-ಹೆಚ್ಚಿನವೆಂದು, ಆಹುಃ-ಹೇಳುವರು. ಆದರೆ, ಇಂದ್ರಿಯೇಭ್ಯಃ-ಇಂದ್ರಿಯಗಳಿಗಿಂತಲೂ, ಮನಃ-ಮನಸ್ಸು, ಪರಂ-ಹೆಚ್ಚಿನದು. ಮನಸಃ-ಮನಸ್ಸಿಗಿಂತಲೂ, ಬುದ್ಧಿಃ- ಬುದ್ಧಿಯು, ಪರಾ-ಹೆಚ್ಚಿನದು. ಬುದ್ಧೇಃ-ಬುದ್ಧಿಗಿಂತ, ಪರತಃ- ಹೆಚ್ಚಿನವನು, ಯಃ-ಯಾವನೆಂದರೆ, ಸಃ-ಆ ಆತ್ಮನು.

ಏವಂ-ಹೀಗೆ, ಬುದ್ಧೇಃ-ಬುದ್ಧಿಗಿಂತ, ಪರಂ-ಹೆಚ್ಚಿನದನ್ನು, ಬುದ್ಧ್ವಾ-ಅರಿತು, ಆತ್ಮಾನಂ-ತನ್ನನ್ನು, ಆತ್ಮನಾ-ತನ್ನಿಂದಲೇ, ಸಂಸ್ತಭ್ಯ- ಬಿಗಿಹಿಡಿದುಕೊಂಡು, ಮಹಾಬಾಹೋ-ಮಹಾಬಾಹುವೆ, ದುರಾಸದಂ-ಸಹಿಸಲು ಅಸಾಧ್ಯವಾದ, ಕಾಮರೂಪಂ-ಕಾಮವೆಂಬ, ಶತ್ರುಂ-ಶತ್ರುವನ್ನು, ಜಹಿ-ನಾಶಮಾಡು.

ಅಂತೂ ಎಲೈ ಅರ್ಜುನನೆ, ಈ ಅಧ್ಯಾತ್ಮವಿದ್ಯೋಪದೇಶವನ್ನು ಪ್ರಪಂಚವು ಹುಟ್ಟಿದಾಗ ಮೊದಲು ನಾನೇ ಸೂರ್ಯನಿಗೆ ಹೇಳಿದೆನು. ಅನಂತರ ಅದು ಮನು-ಮುಂತಾದವರ ಮೂಲಕ ಲೋಕದಲ್ಲಿ ಹರಡಿ

ಕೊನೆಗೆ ನಷ್ಟವಾಯಿತು. ಈಗ ಮತ್ತೆ ನಾನು ನಿನಗೆ ಹೇಳುತ್ತಿದೇನೆ. ಹೀಗೆಯೇ ಧರ್ಮಸಂಕಟವಾದಾಗಲೆಲ್ಲ ನಾನು -

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾऽऽತ್ಮಾನಂ ಸೃಜಾಮ್ಯಹಮ್ ॥ ೪-೭**

ಭಾರತ-ಎಲೈ ಭರತಶ್ರೇಷ್ಠನೆ, ಯದಾ ಯದಾ-ಯಾವಯಾವಾಗ, ಧರ್ಮಸ್ಯ-ಧರ್ಮಕ್ಕೆ, ಗ್ಲಾನಿಃ-ಹಾನಿಯು, ಭವತಿ-ಆಗುತ್ತದೆಯೋ, ಅಧರ್ಮಸ್ಯ- ಅಧರ್ಮದ, ಅಭ್ಯುತ್ಥಾನಂ-ಏಳುವಿಕೆಯು ಆಗುವದೋ, ತದಾ - ಆಗ, ಅಹಂ- ನಾನು, ಆತ್ಮಾನಂ-ನನ್ನನ್ನು, ಸೃಜಾಮಿ-ಸೃಷ್ಟಿಮಾಡುವೆನು (ಅವತಾರಮಾಡುವೆನು).

**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥ ೪-೮**

ಸಾಧೂನಾಂ-ಸಾತ್ವಿಕರ, ಪರಿತ್ರಾಣಾಯ-ರಕ್ಷಣೆಗಾಗಿ, ಚ-ಮತ್ತು ದುಷ್ಕೃತಾಂ - ದುಷ್ಟಜನರ, ವಿನಾಶಾಯ-ನಾಶಕ್ಕಾಗಿ, ಧರ್ಮಸಂಸ್ಥಾಪನಾರ್ಥಾಯ- ಲೋಕದ ಬದುಕಿಗೆ ಆಧಾರವಾದ ಧರ್ಮವನ್ನು ಸ್ಥಾಪಿಸುವದಕ್ಕಾಗಿ, ಯುಗೇ ಯುಗೇ- ಪ್ರತಿಯುಗದಲ್ಲೂ, ಸಂಭವಾಮಿ-ಅವತಾರ ಮಾಡುತ್ತೇನೆ.

ಹೀಗೆ ಧರ್ಮೋದ್ಧಾರಕ್ಕಾಗಿ ಅವತಾರಮಾಡುತ್ತಿರುವ ನಾನು ಆಯಾ ಜನರ ಗುಣಕರ್ಮಗಳಿಗೆ ಅನುಸಾರವಾಗಿ ನಾಲ್ಕು ವರ್ಣಗಳನ್ನು ಸೃಷ್ಟಿಮಾಡಿರುತ್ತೇನೆ. ಈ ವರ್ಣವ್ಯವಸ್ಥೆಯು ಕ್ರಮವಾಗಿ ಧರ್ಮದ ಅನುಷ್ಠಾನ, ರಕ್ಷಣೆ, ಪೋಷಣೆ, ಶುಶ್ರೂಷೆ- ಈ ಉದ್ದೇಶಗಳಿಗಾಗಿ ಮೀಸಲಾಗಿದೆ. ಸತ್ತ್ವಪ್ರಧಾನರಾದವರನ್ನು ಬ್ರಾಹ್ಮಣರೆಂದೂ, ರಜಃ ಪ್ರಧಾನವಾಗಿ ಸತ್ತ್ವವು ಅಂಗವಾಗಿರುವವರನ್ನು ಕ್ಷತ್ರಿಯರೆಂದೂ, ರಜಃ ಪ್ರಧಾನವಾಗಿ ತಮಸ್ಸು ಅಂಗವಾಗಿರುವವರನ್ನು ವೈಶ್ಯರೆಂದೂ, ತಮಸ್ಸೇ ಪ್ರಧಾನವಾಗಿ ರಜಸ್ಸು ಅಂಗವಾಗಿರುವವರನ್ನು ಶೂದ್ರರೆಂದೂ ವಿಂಗಡಿಸಿದ್ದೇನೆ. ಇದೆಲ್ಲವೂ ಜಗತ್ತಿನ ಕಲ್ಯಾಣಕ್ಕಾಗಿಯೇ ವ್ಯವಸ್ಥೆ

ಗೊಳಿಸಲ್ಪಟ್ಟಿದೆ. ಎಲ್ಲರೂ ಧರ್ಮವನ್ನೇ ಗುರಿಯಾಗಿ ಉಳ್ಳವರಾಗಿರಬೇಕೆಂದು ನನ್ನ ಸಂಕಲ್ಪವಿದೆ. ಹೀಗೆ **ಜಾತಿಗುಣ**ಗಳ ಸೃಷ್ಟಿಕರ್ತನು ನಾನಾದರೂ ನಿಜವಾಗಿ ನನಗೆ ಯಾವ ಕರ್ತೃತ್ವವೂ ಇಲ್ಲ. ಕೇಳು :

**ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ।**
**ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್ ॥ ೪-೧೩**

ಗುಣಕರ್ಮವಿಭಾಗಶಃ-ಸತ್ವಾದಿಗುಣಗಳು, ವೇದಾಧ್ಯಯನಾದಿಕರ್ಮಗಳ ವಿಂಗಡಣೆಗಳಿಗನುಗುಣವಾಗಿ, ಮಯಾ-ನನ್ನಿಂದ, ಚಾತುವರ್ಣ್ಯಂ-ನಾಲ್ಕುಜಾತಿಗಳು, ಸೃಷ್ಟಂ-ಸೃಷ್ಟಿಮಾಡಲ್ಪಟ್ಟವು. ತಸ್ಯ- ಅದರ, ಕರ್ತಾರಂ ಅಪಿ-ಸೃಷ್ಟಿಕರ್ತನಾಗಿರುವೆನಾದರೂ, ಮಾಂ-ನನ್ನನ್ನು, ಅವ್ಯಯಮ್-ನಾಶರಹಿತನೂ, ಅಕರ್ತಾರಂ-ಕರ್ತೃವಲ್ಲವೆಂದೂ, ವಿದ್ಧಿ - ತಿಳಿಯುವವನಾಗು.

ಇಂಥ ನನ್ನ ತತ್ತ್ವವನ್ನು ಯಾರು ಸರಿಯಾಗಿ ತಿಳಿಯುವರೋ ಅವರು ಕೃತಕೃತ್ಯರಾಗುವರು. ಉಳಿದವರು ಈ ಸಂಸಾರದಲ್ಲಿ ಮತ್ತೆ ಮತ್ತೆ ಹುಟ್ಟಿ ಸಾಯುವರು. ಆದ್ದರಿಂದ ನನ್ನನ್ನು ತಿಳಿದವನೇ ಜ್ಞಾನಿಯು. ಜ್ಞಾನವೆಂಬುದು ಬಹಳ ಹೆಚ್ಚಿನದು. ಕೇಳು :

**ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।**
**ತತ್ ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿನ್ದತಿ ॥ ೪-೩೮**

ಇಹ- ಇಲ್ಲಿ, ಜ್ಞಾನೇನ-ಜ್ಞಾನಕ್ಕೆ, ಸದೃಶಂ-ಸಮಾನವಾದ, ಪವಿತ್ರಂ-ಶ್ರೇಷ್ಠವಾದದ್ದು, ನ ಹಿ ವಿದ್ಯತೇ-ಇರುವದಿಲ್ಲ, ಯೋಗಸಂಸಿದ್ಧಃ-ಕರ್ಮಯೋಗಚಿತ್ತಶುದ್ಧಿಗಳಿಂದ, ಸಂಸಿದ್ಧಃ-ಸಂಸ್ಕೃತನಾದವನು, (ಯೋಗ್ಯತೆಯನ್ನು ಪಡೆದವನು), ಕಾಲೇನ-ಬಹಳ ಕಾಲದ ಮೇಲೆ, ಆತ್ಮನಿ-ತನ್ನಲ್ಲಿಯೇ, ಸ್ವಯಂ-ತಾನೇ, ತತ್-ಆ ಜ್ಞಾನವನ್ನು, ವಿನ್ದತಿ- ಪಡೆದುಕೊಳ್ಳುವನು.

ಜ್ಞಾನವೇ ಎಲ್ಲಕ್ಕಿಂತ ಮಿಗಿಲಾದುದಾದರೆ ಅದನ್ನೇ ಸಾಧಿಸಬಹುದಲ್ಲ ! ಕರ್ಮವನ್ನೇಕೆ ಮಾಡಬೇಕು ? -ಎಂದರೆ : ಸಾಮಾನ್ಯಜನರಿಗೆ ಒಂದೇ ಬಾರಿಗೆ ಜ್ಞಾನವು ಹಿಡಿಸುವದಿಲ್ಲ. ಅದಕ್ಕಾಗಿ ಅದನ್ನು ಗುರಿಯಾಗಿಟ್ಟುಕೊಂಡು ಮೊದಲು ಕರ್ಮವನ್ನೇ ಮಾಡಬೇಕು. ಹೇಗೆಂದರೆ :

**ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।**
**ಲಿಪ್ಯತೇ ನ ಸ ಪಾಪೇನ ಪದ್ಮಮಿತ್ರಮಿವಾಂಭಸಾ ॥ ೫-೧೦**

ಯಃ- ಯಾವನು, ಕರ್ಮಾಣಿ-ತಾನು ಮಾಡುವ ಕೆಲಸಗಳನ್ನು, ಬ್ರಹ್ಮಣಿ-ಭಗವಂತನಲ್ಲಿ, ಆಧಾಯ-ಸಮರ್ಪಿಸಿ, ಸಂಗಂ-ಆಶೆಯನ್ನು, ತ್ಯಕ್ತ್ವಾ-ಬಿಟ್ಟು, ಕರೋತಿ-ಮಾಡುವನೋ, ಸಃ-ಅವನು, ಅಂಭಸಾ- ನೀರಿನಿಂದ, ಪದ್ಮಪತ್ರ ಮಿವ- ತಾವರೆಯೆಲೆಯಂತೆ (ನೀರಿನಲ್ಲಿದ್ದರೂ ತಾವರೆ ಎಲೆಯು ಅದಕ್ಕೆ ಅಂಟಿಕೊಳ್ಳದೆ ಇರುವಂತೆ) ಪಾಪೇನ-ಪಾಪದಿಂದ, ನ ಲಿಪ್ಯತೇ-ಅಂಟಿಕೊಳ್ಳುವದಿಲ್ಲ.

**ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ ।**
**ಯೋಗಿನಃ ಕರ್ಮ ಕುರ್ವನ್ತಿ ಸಂಗಂ ತ್ಯಕ್ತ್ವಾತ್ಮ ಶುದ್ಧಯೇ ॥ ೫-೧೧**

ಯೋಗಿನಃ- ಯೋಗಿಗಳು, ಕಾಯೇನ-ಶರೀರದಿಂದ, ಮನಸಾ- ಮನಸ್ಸಿನಿಂದ, ಬುದ್ಧ್ಯಾ-ಬುದ್ಧಿಯಿಂದ, ಕೇವಲೈಃ-ನನ್ನದೆಂಬುದಿಲ್ಲದ, ಇಂದ್ರಿಯೈಃ-ಕಣ್ಣು, ಕಿವಿ ಮುಂತಾದ ಇಂದ್ರಿಯಗಳಿಂದಲೂ, ಸಂಗಂ- ಆಸಕ್ತಿಯನ್ನು, ತ್ಯಕ್ತ್ವಾ-ಬಿಟ್ಟು, ಆತ್ಮಶುದ್ಧಯೇ-ಅಂತಃಕರಣಶುದ್ಧಿಗಾಗಿ, ಕರ್ಮ-ಕರ್ಮವನ್ನು, ಕುರ್ವನ್ತಿ- ಮಾಡುತ್ತಾರೆ.

ಆದ್ದರಿಂದ ಕರ್ಮಯೋಗದಲ್ಲಿದ್ದುಕೊಂಡಿದ್ದರೆ ಸಮಚಿತ್ತತ್ವವುಂಟಾಗಿ ಜ್ಞಾನಕ್ಕೆ ಅನುಕೂಲವಾಗುವದು. ಆಗ ಎಂಥ ಜ್ಞಾನವಾಗುವದೆಂದರೆ :

**ಭೋಕ್ತಾರಂ ಯಜ್ಞ ತಪಸಾಂ ಸರ್ವಲೋಕಮಹೇಶ್ವರಮ್ ।**
**ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾನ್ತಿ ಮೃಚ್ಛತಿ॥ ೫-೨೯**

ಯಜ್ಞತಪಸಾಂ-ಯಜ್ಞ ಮತ್ತು ತಪಸ್ಸುಗಳ, ಭೋಕ್ತಾರಂ-ಫಲಪ್ರದನೂ, ಒಡೆಯನೂ ಆದ, ಸರ್ವಲೋಕಮಹೇಶ್ವರಮ್- ಎಲ್ಲಾ ಲೋಕಗಳಿಗೂ ಮಹಾಪ್ರಭುವಾದ, ಸರ್ವಭೂತಾನಾಂ-ಎಲ್ಲಾ ಪ್ರಾಣಿಗಳಿಗೂ, ಸುಹೃದಂ-ಪ್ರತ್ಯುಪಕಾರದ ಅಪೇಕ್ಷೆಯಿಲ್ಲದೆ ಉಪಕಾರಮಾಡುವ, ಮಾಂ-ನಾರಾಯಣನಾದ ನನ್ನನ್ನು, ಜ್ಞಾತ್ವಾ-ಅರಿತುಕೊಂಡು, ಶಾಂತಿಂ-ಶಾಂತಿಯನ್ನು, ಋಚ್ಛತಿ-ಹೊಂದುವನು.

ಆದ್ದರಿಂದ ಮನುಷ್ಯನು ಈ ಜನ್ಮದಲ್ಲಿಯೇ ಭಗವಂತನ ಪ್ರಾಪ್ತಿಗಾಗಿ ತಾನೇ ಪ್ರಯತ್ನಮಾಡಬೇಕು. ಅಧ್ಯಾತ್ಮಮಾರ್ಗದಲ್ಲಿ ಮತ್ತೆ ಯಾರೂ ಸಹಾಯಕರಿಲ್ಲ. ಹೇಗೆಂದರೆ :

**ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।**
**ಆತ್ಮೈವ ಹ್ಯಾತ್ಮನೋ ಬನ್ಧುರಾತ್ಮೈವ ರಿಪುರಾತ್ಮನಃ ॥ ೬-೫**

ಆತ್ಮಾನಂ-ತನ್ನನ್ನು, ಆತ್ಮನಾ-ತನ್ನಿಂದಲೇ, ಉದ್ಧರೇತ್- ಕಾಪಾಡಿಕೊಳ್ಳಬೇಕು. ಆತ್ಮಾನಂ-ತನ್ನನ್ನು, ನಾವಸಾದಯೇತ್-ಕುಸಿದುಕೊಳ್ಳುವಂತೆ ಮಾಡಬಾರದು, ಆತ್ಮನಃ-ತನಗೆ, ಆತ್ಮೈವ-ತಾನೇ, ಬಂಧುಃ- ಬಂಧುವು (ನೆಂಟನು), ಆತ್ಮನಃ-ತನಗೆ, ಆತ್ಮೈವ-ತಾನೇ, ರಿಪುಃ-ಶತ್ರುವು.

ಸಂಸಾರಬಂಧದಿಂದ ನಿರ್ಮುಕ್ತನಾಗಲು ತಾನೇ ಪ್ರಯತ್ನಿಸಬೇಕು. ಹಾಗೆ ಮಾಡದಿದ್ದರೆ ತನಗೆ ತಾನೇ ಅಪಕಾರಮಾಡಿಕೊಂಡವನಾಗುತ್ತಾನೆ - ಎಂದು ತಾತ್ಪರ್ಯ.

ಸಂಸಾರಸಾಗರದಿಂದ ಉದ್ಧಾರವಾಗಲಿಚ್ಛಿಸುವವನು ಯೋಗವೆಂಬ ಸಾಧನವನ್ನು ಕೈಗೊಳ್ಳಬೇಕು. ಯೋಗವೆಂದರೆ ಇಲ್ಲಿ **ಅಧ್ಯಾತ್ಮ ಯೋಗ**ವೆಂದರ್ಥ. ಅಂದರೆ ಮೆಲ್ಲಮೆಲ್ಲನೆ ಇಂದ್ರಿಯಗಳನ್ನು ವಶಗೊಳಿಸಿಕೊಂಡು ಮನಸ್ಸನ್ನು ಏಕಾಗ್ರವಾಗಿ ಮಾಡಿಕೊಂಡು ತನ್ನಲ್ಲೇ ತಾನು ನೆಲೆನಿಲ್ಲುವದು. ಇದು ಅಭ್ಯಾಸದಿಂದ ಸಾಧ್ಯ. ಇಂಥ ಯೋಗವನ್ನು ಮಾಡುವವನು ಶರೀರಮನಸ್ಸುಗಳನ್ನು ಹೇಗಿಟ್ಟುಕೊಂಡಿರಬೇಕೆಂದರೆ :

**ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ ।**
**ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥ ೬-೧೩**

**ಪ್ರಶಾಂತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ ।**
**ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ ॥ ೬-೧೪**

ಕಾಯಶಿರೋಗ್ರೀವಂ-ದೇಹಕತ್ತುಕುತ್ತಿಗೆಗಳನ್ನು, ಸಮಂ- ಸಮನಾಗಿ, ಅಚಲಂ-ಅಳ್ಳಾಡದಂತೆ, ಧಾರಯನ್-ಇಟ್ಟುಕೊಂಡು, ಸ್ಥಿರಃ- ನಿಶ್ಚಲನಾಗಿ,

ಸ್ವಂ-ತನ್ನ, ನಾಸಿಕಾಗ್ರಂ-ಮೂಗಿನ ತುದಿಯನ್ನು, ಸಂಪ್ರೇಕ್ಷ್ಯ - ನೋಡುತ್ತಾ, ದಿಶಶ್ಚ-ದಿಕ್ಕುಗಳನ್ನು, ಅನವಲೋಕಯನ್ -ನೋಡದೆ ಇರುವವನಾಗಿ, (ಕುಳಿತುಕೊಳ್ಳಬೇಕು.)

ಪ್ರಶಾಂತಾತ್ಮಾ-ಸಮಾಧಾನವಾದ ಚಿತ್ತವುಳ್ಳವನಾಗಿ, ವಿಗತಭೀಃ-ಭಯವಿಲ್ಲದವನಾಗಿ, ಬ್ರಹ್ಮಚಾರಿವ್ರತೇ-ಬ್ರಹ್ಮಚರ್ಯನಿಯಮದಲ್ಲಿ, ಸ್ಥಿತಃ-ಇದ್ದುಕೊಂಡು, ಮನಃ-ಮನಸ್ಸನ್ನು, ಸಂಯಮ್ಯ-ಬಿಗಿಹಿಡಿದು, ಮಚ್ಚಿತ್ತಃ-ನನ್ನಲ್ಲೇ ಸ್ಮರಣೆಯುಳ್ಳವನಾಗಿ, ಯುಕ್ತಃ-ಯೋಗದಿಂದ ಕೂಡಿದವನಾಗಿ, ಮತ್ಪರಃ-ನನ್ನನ್ನೇ ಗತಿಯಾಗಿ ತಿಳಿದು, ಆಸೀತ-ಇರಬೇಕು.

ಹೀಗೆ ಅಧ್ಯಾತ್ಮಯೋಗವನ್ನು ಅಭ್ಯಾಸಮಾಡುವ ಸಾಧಕನಿಗೆ :

**ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।**
**ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥ ೬-೧೭**

ಯುಕ್ತಾಹಾರವಿಹಾರಸ್ಯ-ಮಿತವಾದ ಆಹಾರವಿಹಾರಗಳುಳ್ಳ, ಕರ್ಮಸು-ಕೆಲಸಗಳಲ್ಲಿ, ಯುಕ್ತಚೇಷ್ಟಸ್ಯ-ಮಿತವಾದ ಪ್ರವೃತ್ತಿಯುಳ್ಳ, ಯುಕ್ತಸ್ವಪ್ನಾವ ಬೋಧಸ್ಯ-ಮಿತವಾದ ನಿದ್ರೆ ಮತ್ತು ಎಚ್ಚರವುಳ್ಳವನಿಗೆ, ದುಃಖಹಾ-ದುಃಖವನ್ನು ನಾಶಮಾಡುವ, ಯೋಗಃ-ಯೋಗವು, ಭವತಿ- ಉಂಟಾಗುತ್ತದೆ.

ಹೀಗೆ ಪ್ರಯತ್ನಶೀಲನಾದ ಸಾಧಕನು ನಿಧಾನವಾಗಿ ಯೋಗವನ್ನು ಏರುತ್ತಾ ಬುದ್ಧಿಯನ್ನು ನಿಶ್ಚಲಗೊಳಿಸಿ ಒಳಗಿರುವ ಆತ್ಮಸ್ವರೂಪವನ್ನೇ ನಿಟ್ಟಿಸಿ ನೋಡುತ್ತಾ ಅದರಲ್ಲೇ ಒಂದಾಗಿ ಸಮದರ್ಶನವನ್ನು ಪಡೆಯು ವನು. ಆಗ :

**ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।**
**ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥ ೬-೨೯**

ಆತ್ಮಾನಂ-ತನ್ನನ್ನು, ಸರ್ವಭೂತಸ್ಥಂ-ಎಲ್ಲಾ ಪ್ರಾಣಿಗಳಲ್ಲಿರುವ ವನನ್ನಾಗಿಯೂ, ಆತ್ಮನಿ-ತನ್ನಲ್ಲಿ, ಸರ್ವಭೂತಾನಿ-ಎಲ್ಲಾ ಭೂತಗಳನ್ನೂ, ಯೋಗಯುಕ್ತಾತ್ಮಾ-ಆತ್ಮನಲ್ಲಿ ನೆಲೆನಿಂತ ಮನಸ್ಸುಳ್ಳವನು, ಸರ್ವತ್ರ- ಎಲ್ಲೆಲ್ಲೂ,

ಸಮದರ್ಶನಃ-ಸಮನಾದ ಭಗವಂತನನ್ನೇ ನೋಡುವವನಾಗಿ, ಈಕ್ಷತೇ-(ಮುಕ್ತಿಯನ್ನು) ಕಂಡುಕೊಳ್ಳುವನು.

ಹೀಗೆ ಉಪದೇಶಿಸಿದ ಕೃಷ್ಣನನ್ನು ಕುರಿತು ಅರ್ಜುನನು, 'ಎಲೈ ಕೃಷ್ಣನೆ, ಇಂಥ ಯೋಗವನ್ನು ಮಾಡುವದು ಸಾಧ್ಯವಾದೀತೆ? ಏಕೆಂದರೆ: ಮನಸ್ಸು ಬಹಳ ಚಂಚಲವಾಗಿದೆ. ಇದು ಹೊರಮುಖವಾಗಿಯೇ ಇದ್ದು ಶರೀರೇಂದ್ರಿಯಗಳನ್ನು ತನ್ನ ಕಡೆಗೇ ಜಗ್ಗುತ್ತಿದೆ. ಗಾಳಿಯನ್ನು ಹಿಡಿಯಲಾಗದಿರುವಂತೆ ಇದನ್ನು ನಿಗ್ರಹಿಸುವದು ದುಸ್ಸಾಧ್ಯವಾದ ಕೆಲಸವೇ ಸರಿ' ಎಂದದ್ದಕ್ಕೆ ಭಗವಂತನು :

**ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್ ।**
**ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥ ೬-೩೫**

ಮಹಾಬಾಹೋ-ಎಲೈ ಮಹಾಬಾಹುವಾದ ಅರ್ಜುನನೆ, ಮನಃ - ಮನಸ್ಸು, ದುರ್ನಿಗ್ರಹಂ-ಹಿಡಿಯಲಸಾಧ್ಯವೆಂಬುದೂ, ಚಲಮ್- ಚಂಚಲವೆಂಬುದೂ, ಅಸಂಶಯಮ್-ನಿಸ್ಸಂಶಯವಾದ ವಿಷಯವೇ. ತು-ಆದರೆ, ಕೌಂತೇಯ-ಎಲೈ ಕುಂತೀಪುತ್ರನೆ, (ಆ ಮನಸ್ಸು) ಅಭ್ಯಾಸೇನ-ಮತ್ತೆಮತ್ತೆ ಯೋಗವನ್ನು ಮಾಡುವದರಿಂದಲೂ, ವೈರಾಗ್ಯೇಣ ಚ- ಮತ್ತು ವೈರಾಗ್ಯದಿಂದಲೂ, ಗೃಹ್ಯತೇ-ಹಿಡಿಯಲು ಸಾಧ್ಯವಾಗುತ್ತದೆ.

ಆದ್ದರಿಂದ ಬಹಳ ಪ್ರಯತ್ನವನ್ನು ಮಾಡಿಯಾದರೂ ಮನಸ್ಸನ್ನು ಹಿಡತಕ್ಕೆ ತಂದುಕೊಂಡು ಯೋಗವನ್ನು ಅಳವಡಿಸಿಕೊಳ್ಳಲೇಬೇಕು. **ಅಧ್ಯಾತ್ಮಯೋಗ**ವಿಲ್ಲದೆ ಸಿದ್ಧಿಯು ದೊರಕುವದಿಲ್ಲ, ಒಂದುವೇಳೆ ಒಂದೇ ಜನ್ಮದಲ್ಲಿ ಯೋಗವು ಸಿದ್ಧಿಸದಿದ್ದರೂ ಚಿಂತಿಸಬೇಕಾಗಿಲ್ಲ. ಅದು ಮಾಡಿದಂತೆಲ್ಲ ವೃದ್ಧಿಯಾಗುತ್ತಾ ಕೊನೆಗೆ ಯಾವದೋ ಒಂದು ಜನ್ಮದಲ್ಲಾದರೂ ಪಕ್ವವಾದ ಫಲವನ್ನು ಕೊಡುವದು. ಆದ್ದರಿಂದ ಯೋಗಿಯೆಂಬುವನು (ಸಾಧಕನು) ಎಲ್ಲರಿಗಿಂತ ಹೆಚ್ಚಿನವನು. ಹೇಗೆಂದರೆ :

**ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ।**
**ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ ಯೋಗೀ ಭವಾರ್ಜುನ ॥**
**೬-೪೬**

ತಪಸ್ವಿಭ್ಯಃ- ತಪಸ್ವಿಗಳಿಗಿಂತಲೂ, ಯೋಗೀ- ಯೋಗಿಯು, ಅಧಿಕಃ- ಹೆಚ್ಚಿನವನು. ಜ್ಞಾನಿಭ್ಯೋಽಪಿ- ಶಾಸ್ತ್ರಜ್ಞಾನಿಗಳಿಗಿಂತಲೂ, (ಪಂಡಿತರಿಗಿಂತ) ಅಧಿಕಃ-ಹೆಚ್ಚಿನವನೆಂದು, ಮತಃ-ತಿಳಿಯಲ್ಪಡುತ್ತಾನೆ. ಹಾಗೆಯೇ, ಕರ್ಮಿಭ್ಯಶ್ಚ- ಕರ್ಮಮಾಡುವವರಿಗಿಂತಲೂ, ಯೋಗೀ- ಯೋಗಿಯು, ಅಧಿಕಃ-ಹೆಚ್ಚಿನವನು, ತಸ್ಮಾದ್-ಆದ್ದರಿಂದ, ಅರ್ಜುನ-ಎಲೈ ಅರ್ಜುನನೆ, ನೀನು, ಯೋಗೀಭವ- ಯೋಗಿಯಾಗು.

ಹೀಗೆ ಮನೋನಿಗ್ರಹಾದಿಗಳಿಂದ ಯೋಗವನ್ನು ಅಳವಡಿಸಿ ಕೊಂಡು ಕಂಡುಕೊಳ್ಳಬೇಕಾಗಿರುವ, ಜಗತ್ತಿನ ಕಾರಣವಾದ ಪರತತ್ವವು ನಾನೇ ಆಗಿರುತ್ತೇನೆ. ಆದ್ದರಿಂದ:

**ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ।**
**ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥ ೭-೭**

ಧನಂಜಯ-ಎಲೈ ಅರ್ಜುನನೆ, ಮತ್ತಃ-ನನಗಿಂತಲೂ, ಅನ್ಯತ್- ಬೇರೊಂದು, ಪರತರಂ-ಹೆಚ್ಚಿನ ಕಾರಣವು, ಕಿಂಚಿತ್-ಏನೊಂದೂ, ನಾಸ್ತಿ- ಇರುವದಿಲ್ಲ. ಸೂತ್ರೇ-ದಾರದಲ್ಲಿ, ಮಣಿಗಣಾ ಇವ-ರತ್ನಗಳ ಸಮೂಹವು ಹೇಗೋ ಹಾಗೆ, ಮಯಿ-ನನ್ನಲ್ಲಿ, ಇದಂ ಸರ್ವಂ-ಈ ಜಗತ್ತೆಲ್ಲವೂ, ಪ್ರೋತಂ-ಹೆಣೆಯಲ್ಪಟ್ಟಿದೆ.

ಹೀಗೆ ಎಲ್ಲೆಲ್ಲಿಯೂ ನಾನೇ ವ್ಯಾಪಿಸಿಕೊಂಡು ಎಲ್ಲರ ಆತ್ಮನಾಗಿದ್ದು ಕೊಂಡಿದ್ದರೂ, ಮಾಯೆಯಿಂದ ಮೋಹಿತರಾದ ಜನರು ನನ್ನನ್ನು ಅರಿಯದೆ ಇರುವರು. ಈ ನನ್ನ ದೈವೀಮಾಯೆಯು ದಾಟಲಸಾಧ್ಯ ವಾದದ್ದು. ಆದರೂ ಯಾರು ನನ್ನನ್ನೇ ಶರಣುಹೊಂದುವರೋ ಅಂಥವರು ಸುಲಭವಾಗಿ ದಾಟಬಲ್ಲರು. ಹೀಗಿದ್ದರೂ ದುಷ್ಕರ್ಮಿ ಗಳಾದವರು ನನ್ನನ್ನು ಆಶ್ರಯಿಸುವದಿಲ್ಲ. ಆದರೆ ಪುಣ್ಯವಂತರಾದ ನಾಲ್ಕು ಬಗೆಯ ಜನರು ನನ್ನನ್ನು ಸೇವಿಸುತ್ತಾರೆ. ಹೇಗೆಂದರೆ:

**ಚತುರ್ವಿಧಾ ಭಜನ್ತೇ ಮಾಂ ಜನಾಃ ಸುಕೃತಿನೋಽರ್ಜುನ।**
**ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥ ೭-೧೬**

ಅರ್ಜುನ-ಎಲೈ ಅರ್ಜುನನೆ,, ಸುಕೃತಿನಃ-ಪುಣ್ಯವಂತರಾದ, ಚತುರ್ವಿಧಾಃ-ನಾಲ್ಕುಬಗೆಯ, ಎಂದರೆ : ಆರ್ತಃ - ಖಾಯಿಲೆ, ಕಳ್ಳರ ಭಯಾದಿಗಳಿಂದ ಬಳಲಿದವನು, ಜಿಜ್ಞಾಸುಃ-ತತ್ತ್ವವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವನು, ಅರ್ಥಾರ್ಥೀ-ಧನರಾಜ್ಯಾದಿಗಳನ್ನು ಬಯಸುವವನು, ಜ್ಞಾನೀ ಚ-ಮತ್ತು ಜ್ಞಾನಿಯು, (ಈ ನಾಲ್ವರು) ಜನಾಃ-ಜನರು, ಭರತರ್ಷಭ-ಎಲೈ ಭರತಶ್ರೇಷ್ಠನೆ, ಮಾಂ-ನನ್ನನ್ನು, ಭಜನ್ತೇ- ಸೇವಿಸುತ್ತಾರೆ.

ಇಂಥ ಭಕ್ತರೊಳಗೆ ಜ್ಞಾನಿಯು ಸರ್ವಶ್ರೇಷ್ಠನು. ಆದರೆ ಎಲ್ಲರಿಗೂ ಜ್ಞಾನವು ಸುಲಭಸಾಧ್ಯವಲ್ಲ. ಅದರ ಪ್ರಾಪ್ತಿಗಾಗಿಯೇ ನಿರಂತರವಾಗಿ ಪ್ರಯತ್ನಮಾಡುತ್ತಲೇ ಇದ್ದರೆ ಕೊನೆಯಲ್ಲಿ :

**ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್ ಮಾಂ ಪ್ರಪದ್ಯತೇ ।**
**ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥ ೭-೧೯**

ಬಹೂನಾಂ-ಬಹಳವಾದ, ಜನ್ಮನಾಂ-(ಜ್ಞಾನಕ್ಕಾಗಿ ಪ್ರಯತ್ನಮಾಡಿದಂಥ) ಹುಟ್ಟುಗಳ, ಅನ್ತೇ-ಕೊನೆಯಲ್ಲಿ, ವಾಸುದೇವಃ-ವಾಸುದೇವನು, ಸರ್ವಂ-ಎಲ್ಲವೂ ಆಗಿದ್ದಾನೆ ; ಇತಿ-ಹೀಗೆಂದು, ಜ್ಞಾನವಾನ್- ಪ್ರಶಸ್ತವಾದ ಜ್ಞಾನವುಳ್ಳವನು, ಮಾಂ-ನನ್ನನ್ನು, ಪ್ರಪದ್ಯತೇ-ಹೊಂದುತ್ತಾನೆ, ಸ-ಅಂಥ ಮಹಾತ್ಮಾ-ಮಹಾತ್ಮನು, ಸುದುರ್ಲಭಃ-ಅತ್ಯಂತ ಅಪರೂಪನು.

ಆದರೆ ಜ್ಞಾನವನ್ನೇ ಬಯಸಿ ಎಲ್ಲರೂ ನನ್ನನ್ನೇ ಪೂಜಿಸುವದಿಲ್ಲ. ಕಾಮವಶರಾಗಿ ಬೇರೆಬೇರೆ ದೇವತೆಗಳನ್ನೂ ಪೂಜಿಸುತ್ತಾರೆ. ಅಂಥವರಿಗೂ ಆಯಾ ದೇವತೆಯಲ್ಲಿಯೇ ನಾನೇ ಶ್ರದ್ಧೆಯನ್ನುಂಟುಮಾಡುವೆನು. ಹೇಗೆಂದರೆ :

**ಯೋಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ ।**
**ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ ॥ ೭-೨೧**

ಯೋ ಯಃ-ಯಾವಯಾವನು, ಯಾಂ ಯಾಂ-ಯಾವಯಾವ, ತನುಂ-ದೇವತಾಸ್ವರೂಪವನ್ನು, ಶ್ರದ್ಧಯಾ-ಶ್ರದ್ಧೆಯಿಂದ, ಅರ್ಚಿತುಂ- ಪೂಜಿಸುವದಕ್ಕೆ, ಇಚ್ಛತಿ-ಬಯಸುವನೋ, ತಸ್ಯ ತಸ್ಯ-ಅವನವನಿಗೆ, ಅಚಲಾಂ-ನಿಶ್ಚಲವಾದ

ಶ್ರದ್ಧೆಯನ್ನು, ತಾಮೇವ-ಆಯಾ ದೇವತೆಯಲ್ಲೇ, ವಿದಧಾಮಿ-ಉಂಟು ಮಾಡುವೆನು.

ಆದರೆ ಹೀಗೆ ಬೇರೆ ದೇವತೆಗಳನ್ನು ಭಜಿಸುವದಕ್ಕಿಂತಲೂ ಸರ್ವ ದೇವಾತ್ಮಕನಾದ ನನ್ನನ್ನೇ ಸೇವಿಸುವದು ಉತ್ತಮ. ಏಕೆಂದರೆ ಅಂಥ ಭಕ್ತನು ಕೊನೆಯಲ್ಲಿ ನನ್ನನ್ನೇ ಸೇರುತ್ತಾನೆ. ಹೀಗೆ ನನ್ನನ್ನು ಪಡೆಯ ಬೇಕಾದರೆ ಯಾವಾಗಲೂ ನನ್ನನ್ನೇ ಚಿಂತಿಸುತ್ತಿರಬೇಕು. ನೀನು ಕೂಡ :

**ತಸ್ಮಾತ್ ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ।**
**ಮಯ್ಯರ್ಪಿತಮನೋಬುದ್ಧಿಃ ಮಾಮೇವೈಷ್ಯಸ್ಯಸಂಶಯಃ ॥ ೮-೭**

ತಸ್ಮಾತ್ - ಆದ್ದರಿಂದ, ಸರ್ವೇಷುಕಾಲೇಷು - ಎಲ್ಲಾಸಮಯಗಳಲ್ಲಿಯೂ, ಮಾಂ-ನನ್ನನ್ನು, ಅನುಸ್ಮರ-(ಶಾಸ್ತ್ರದಲ್ಲಿ ಹೇಳಿರುವಂತೆ ಹಾಗೂ ಗುರುಗಳು ಉಪದೇಶಿಸಿದಂತೆ) ಧ್ಯಾನಿಸು. ಚ-ಮತ್ತು, ಯುಧ್ಯ-ಯುದ್ಧವನ್ನೂ ಮಾಡು, (ನಿನ್ನ ಕರ್ತವ್ಯವನ್ನು ಮಾಡು), ಮಯ್ಯರ್ಪಿತಮನೋಬುದ್ಧಿಃ-ನನ್ನಲ್ಲೇ ನೆಲೆಗೊಳಿಸಿದ ಮನಸ್ಸು ಮತ್ತು ಬುದ್ಧಿಯುಳ್ಳವನಾಗಿ, ಮಾಮೇವ- ನನ್ನನ್ನೇ, ಏಷ್ಯಸಿ-ಸೇರುವೆ, ಅಸಂಶಯಃ -ಈ ವಿಷಯದಲ್ಲಿ ಏನೂ ಸಂದೇಹವಿಲ್ಲ.

ಮರಣಕಾಲದವರೆಗೂ ಹೀಗೆ ನನ್ನನ್ನೇ ಧ್ಯಾನಿಸುತ್ತಿದ್ದರೆ ಕೊನೆಯಲ್ಲಿ ;

**ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್ ।**
**ಯಃ ಪ್ರಯಾತಿ ತ್ಯಜನ್ ದೇಹಂ ಸ ಯಾತಿ ಪರಮಾಂ ಗತಿಮ್॥ ೮-೧೩**

ಯಃ-ಯಾವನು, ಓಂ ಇತಿ-ಓಂ ಎಂದು, ಏಕಾಕ್ಷರಮ್-ಒಂದೇ ಅಕ್ಷರ ವಾಚ್ಯನಾದ, ಬ್ರಹ್ಮ-ಭಗವಂತನನ್ನು, ವ್ಯಾಹರನ್-ಉಚ್ಚರಿಸುತ್ತಾ, ಮಾಂ-ನನ್ನನ್ನು, ಅನುಸ್ಮರನ್-ಯಥಾಶಾಸ್ತ್ರವಾಗಿ ಸ್ಮರಣೆಮಾಡುತ್ತಾ, ದೇಹಂ-ಶರೀರವನ್ನು, ತ್ಯಜನ್-ಬಿಡುವವನಾಗಿ, ಪ್ರಯಾತಿ-ಪರಲೋಕಕ್ಕೆ ಹೋಗುವನೋ, ಸಃ-ಅವನು, ಪರಮಾಂ ಗತಿಮ್-ಹೆಚ್ಚಿನ ಗತಿಯನ್ನು, ಯಾತಿ-ಹೊಂದುವನು.

**ಅನನ್ಯಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।**
**ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥ ೮ -೧೪**

ಪಾರ್ಥ-ಎಲೈ ಅರ್ಜುನನೆ, ಯಃ-ಯಾವನು, ಅನನ್ಯಚೇತಾಃ-ನಿಶ್ಚಲವಾದ ಚಿತ್ತವುಳ್ಳವನಾಗಿ, ನಿತ್ಯಶಃ-ಯಾವಾಗಲೂ, ಸತತಂ-ನಿರಂತರವಾಗಿ, ಮಾಂ-ನನ್ನನ್ನು, ಸ್ಮರತಿ-ಧ್ಯಾನಿಸುವನೋ, ನಿತ್ಯಯುಕ್ತಸ್ಯ- ಯಾವಾಗಲೂ, ನನ್ನನ್ನೇ ಹೊಂದಿಕೊಂಡಿರುವ, ತಸ್ಯ-ಆ, ಯೋಗಿನಃ- ಯೋಗಿಗೆ, ಅಹಂ-ನಾನು, ಸುಲಭಃ -ಸುಲಭನು.

ಹೀಗೆ ಅನನ್ಯಭಕ್ತಿಯಿಂದ ಪಡೆದುಕೊಳ್ಳಬೇಕಾಗಿರುವ ಭಗವಂತ ನನ್ನು ಭಾವನೆಯಿಂದ ಪಡೆಯುವ ಮಾರ್ಗವೊಂದು. ಇದಲ್ಲದೆ ಜ್ಞಾನದಿಂದ ಪಡೆಯುವ ಮಾರ್ಗವೂ ಮತ್ತೊಂದಿದೆ. ಅದನ್ನು ರಾಜ ಮಾರ್ಗವೆಂದು ಹೇಳಬಹುದು. ಅದಕ್ಕೆ ಉತ್ತಮಸಂಸ್ಕಾರವು ಬೇಕು. ಮಾರ್ಗಗಳು ಬೇರೆಬೇರೆಯಾಗಿದ್ದರೂ ಪಡೆದುಕೊಳ್ಳಬೇಕಾಗಿರುವ ತತ್ತ್ವವು ಒಂದೇ. ಅದೇ ಭಗವಂತನು. ಆ ಭಗವಂತನ ಸ್ವರೂಪವು ಎಲ್ಲಕ್ಕೂ ಮಿಗಿಲಾದದ್ದು. ಅವನಿಂದಲೇ ಪ್ರಕೃತಿಯ ಮೂಲಕ ಈ ಜಗತ್ತೆಲ್ಲವೂ ಸೃಷ್ಟವಾಗಿದೆ. ಹೇಗೆಂದರೆ :

**ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್ ।**
**ಹೇತುನಾಽನೇನ ಕೌಂತೇಯ ಜಗದ್ವಿಪರಿವರ್ತತೇ ॥ ೯-೧೦**

ಕೌಂತೇಯ-ಎಲೈ ಕುಂತೀಪುತ್ರನೆ, ಅಧ್ಯಕ್ಷೇಣ-ವಿಕಾರವಿಲ್ಲದೆ ನೋಡುವ ಸಾಕ್ಷಿಯಾದ, ಮಯಾ-ನನ್ನಿಂದ, (ನನ್ನ ಚೈತನ್ಯಬಲದಿಂದ) ಪ್ರಕೃತಿ-ಪ್ರಕೃತಿಯು, ಸಚರಾಚರಂ - ಚೇತನಾಚೇತನಗಳಿಂದ ಕೂಡಿದ ಜಗತ್ತನ್ನು, ಸೂಯತೇ - ಹಡೆಯುತ್ತದೆ. ಅನೇನ ಹೇತುನಾ- ಈ ಕಾರಣದಿಂದ, ಜಗತ್-ಪ್ರಪಂಚವು, ವಿಪರಿವರ್ತತೇ-ತಿರುಗುತ್ತಿರುವದು.

ಮತ್ತು ನಾನೇ ಜಗತ್ತಿಗೆಲ್ಲ ತಂದೆಯೂ ತಾಯಿಯೂ ಎಲ್ಲವೂ ಆಗಿದ್ದೇನೆ. ಕೇಳು :

**ಪಿತಾಹಮಸ್ಯ ಜಗತೋ ಮಾತಾ ಧಾತಾ ಪಿತಾಮಹಃ ।**
**ವೇದ್ಯಂ ಪವಿತ್ರಮೋಂಕಾರ ಋಕ್ಸಾಮ ಯಜುರೇವ ಚ ॥ ೯-೧೭**

ಅಹಂ-ನಾನು, ಅಸ್ಯಜಗತಃ-ಈ ಪ್ರಪಂಚಕ್ಕೆ, ಪಿತಾ-ತಂದೆಯು.

ಧಾತಾ-ಕರ್ಮಫಲವನ್ನು ಗೊತ್ತುಪಡಿಸುವವನು. ಪಿತಾಮಹಃ- ತಂದೆಯ ತಂದೆಯು. ಪವಿತ್ರಂ-ಪಾವನವಾದ, ವೇದ್ಯಂ-ತಿಳಿಯಲು ಯೋಗ್ಯವಾದ, ಓಂಕಾರಃ-ಓಂಕಾರವು. ಋಕ್ಸಾಮ-ಋಗ್ವೇದಸಾಮವೇದಗಳು, ಚ-ಮತ್ತು, ಯಜುರೇವ- ಯಜುರ್ವೇದವೂ (ಆಗಿರುವೆನು).

ಹೀಗೆ ಎಲ್ಲವೂ ನಾನೆಂದು ತಿಳಿದು ನನ್ನನ್ನೇ ಚಿಂತಿಸುತ್ತಿರುವ ಭಕ್ತರನ್ನು ಎಲ್ಲಾ ಕಾಲಗಳಲ್ಲಿಯೂ ನಾನೇ ನೋಡಿಕೊಳ್ಳುವೆನು. ಹೇಗೆಂದರೆ :

**ಅನನ್ಯಾಶ್ಚಿನ್ತಯನ್ತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥ ೯-೨೨**

ಯೇ-ಯಾವ, ಜನಾಃ-ಜನರು, ಮಾಂ-ನನ್ನನ್ನು, ಅನನ್ಯಾಃ- ನನಗಿಂತ ಬೇರೆಯಲ್ಲದವರಾಗಿ, ಚಿನ್ತಯನ್ತಃ-.ಚಿಂತಿಸುತ್ತಾ, ಪರ್ಯುಪಾಸತೇ-ಎಲ್ಲೆಲ್ಲೂ ಧ್ಯಾನಮಾಡುತ್ತಾರೋ, ನಿತ್ಯಾಭಿಯುಕ್ತಾನಾಂ- ಯಾವಾಗಲೂ ನನ್ನನ್ನು ಚೆನ್ನಾಗಿ ಸಂಬಂಧಿಸಿಕೊಂಡಿರುವ, ತೇಷಾಂ-ಅವರುಗಳ, ಯೋಗಕ್ಷೇಮಂ-ಯೋಗ ಕ್ಷೇಮಗಳನ್ನು, ಅಹಂ-ನಾನು, ವಹಾಮಿ-ನಿರ್ವಹಿಸುತ್ತೇನೆ.

ಆದರೆ ನನ್ನನ್ನು ಸದಾ ಭಜಿಸುವದು ಕಷ್ಟವೇನೂ ಅಲ್ಲ. ಕೇವಲ ಭಕ್ತಿಯೊಂದಿದ್ದರೆ ಸಾಕು. ಅಷ್ಟರಿಂದಲೇ ನಾನು ಒಲಿಯುತ್ತೇನೆ. ಹೇಗೆಂದರೆ :

**ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।**
**ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥ ೯-೨೬**

ಯಃ-ಯಾವನು, ಮೇ-ನನಗೆ, ಪತ್ರಂ-ಒಂದು ಎಲೆಯನ್ನು, ಪುಷ್ಪಂ- ಒಂದು ಹೂವನ್ನು, ಫಲಂ-ಒಂದು ಹಣ್ಣನ್ನು, ತೋಯಂ-ಒಂದು ತೊಟ್ಟು ನೀರನ್ನು, (ಹೀಗೆ ಏನನ್ನಾದರೂ) ಭಕ್ತ್ಯಾ-ಪ್ರೇಮದಿಂದ, ಪ್ರಯಚ್ಛತಿ- ಕೊಡು ತ್ತಾನೋ, ಪ್ರಯತಾತ್ಮನಃ-ಶುದ್ಧಬುದ್ಧಿಯಾದ ಅವನಿಂದ, ಭಕ್ತ್ಯುಪಹೃತಂ-ಭಕ್ತಿ ಯಿಂದ ಕೊಡಲ್ಪಟ್ಟ, ತತ್-ಆದನ್ನು, ಅಹಂ-ನಾನು, ಅಶ್ನಾಮಿ-(ತಿನ್ನುತ್ತೇನೆ) ಸ್ವೀಕರಿಸುತ್ತೇನೆ.

ಆದ್ದರಿಂದ ನೀನು ಮಾಡುವ ಎಲ್ಲಾ ಕರ್ಮಗಳನ್ನೂ ಅವು ವೈದಿಕವಾಗಲಿ ಲೌಕಿಕವಾಗಲಿ ಯಾವವೇ ಆಗಿರಲಿ, ನನಗೆ ಅರ್ಪಿಸು. ಹೇಗೆಂದರೆ:

**ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।**
**ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥ ೯-೨೭**

ಕೌಂತೇಯ-ಎಲೈ ಕುಂತೀಪುತ್ರನೆ, ಯತ್ಕರೋಷಿ-ಯಾವ ಕರ್ಮವನ್ನು ಮಾಡುವೆಯೋ, ಯದಶ್ನಾಸಿ-ಏನನ್ನು ತಿನ್ನುವೆಯೋ, ಯಜ್ಜುಹೋಷಿ-ಏನನ್ನು ಹೋಮಮಾಡುವೆಯೋ, ಯತ್ ದದಾಸಿ - ಏನನ್ನು ದಾನಮಾಡುವೆಯೋ, ಯತ್ ತಪಸ್ಯಸಿ-ಏನೊಂದು ತಪಸ್ಸನ್ನು ಮಾಡುವೆಯೋ, ತತ್-ಅದೆಲ್ಲವನ್ನೂ, ಮದರ್ಪಣಂ-ನನಗೆ ಸಮರ್ಪಣೆಯಾಗಿ, ಕುರುಷ್ವ-ಮಾಡು.

ಹಾಗಾದರೆ ಭಗವಂತನು ರಾಗದ್ವೇಷವುಳ್ಳವನು ಮತ್ತು ಪಕ್ಷಪಾತವುಳ್ಳವನು. ಏಕೆಂದರೆ ಭಕ್ತರನ್ನು ಮಾತ್ರ ಕಾಪಾಡುತ್ತಾನೆ - ಎಂದು ತಿಳಿಯಬಾರದು. ಹೇಗೆಂದರೆ :

**ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।**
**ಯೇ ಭಜನ್ತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥**
**೯-೨೯**

ಅಹಂ-ನಾನು, ಸರ್ವಭೂತೇಷು-ಎಲ್ಲರಲ್ಲಿಯೂ, ಸಮಃ-ಸಮನಾಗಿರುವೆನು. ಮೇ-ನನಗೆ, ದ್ವೇಷ್ಯಃ-ಶತ್ರುವಾಗಲಿ, ಪ್ರಿಯಃ-ಪ್ರಿಯನಾಗಲಿ, ನಾಸ್ತಿ-ಇಲ್ಲ. ತು-ಆದರೆ, ಯೇ-ಯಾರು, ಮಾಂ-ನನ್ನನ್ನು, ಭಕ್ತ್ಯಾ-ಪ್ರೇಮದಿಂದ, ಭಜನ್ತಿ-ಸೇವಿಸುತ್ತಾರೋ, ತೇ-ಅವರು, ಮಯಿ- ನನ್ನಲ್ಲಿಯೂ, ಅಹಂ-ನಾನು, ತೇಷು ಚ - ಅವರಲ್ಲಿಯೂ (ಇರುವೆನು).

ಎಂಥ ದುರಾಚಾರಿಯಾಗಿರಲಿ, ಅವನು ಭಗವಂತನನ್ನು ಭಜಿಸಿದ್ದೇ ಆದರೆ ಉದ್ಧಾರವಾಗಿಬಿಡುವನು. ಏಕೆಂದರೆ ಆ ಭಗವಂತನ ಭಕ್ತಿಯು ಅಂಥದ್ದು. ಭಕ್ತಿಯ ಮಾಹಾತ್ಮ್ಯವನ್ನು ಕೇಳಿರಿ :

**ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ।**
**ಸಾಧುರೇವ ಸ ಮನ್ತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥ ೯-೩೦**

ಅಪಿ-ಒಂದುವೇಳೆ, ಸುದುರಾಚಾರಃ -ಹೆಚ್ಚಿನ ದುರಾಚಾರಿಯಾದರೂ, ಮಾಂ-ನನ್ನನ್ನು, ಅನನ್ಯಭಾಕ್- ಅನನ್ಯಭಾವದಿಂದ, ಭಜತೇ ಚೇತ್- ಭಜಿಸುವವನಾದರೆ, ಸಃ-ಅವನು, ಸಾಧುರೇವ- ಒಳ್ಳೆಯ ನಡತೆಯವನೆಂದೇ, ಮನ್ತವ್ಯಃ-ತಿಳಿಯಬೇಕು. ಹಿ-ಏಕೆಂದರೆ, ಸಃ- ಅವನು, ಸಮ್ಯಗ್ ವ್ಯವಸ್ಥಿತಃ - ಸರಿಯಾದ ನಿಶ್ಚಯವುಳ್ಳವನಾಗಿರುವನು.

ಭಗವಂತನನ್ನು ಹೀಗೆ ಭಜಿಸುತ್ತಿದ್ದರೆ ಭಕ್ತನಾಗಿ ಮಾನವನು ಬೇಗ ಉದ್ಧಾರವಾಗುವನು. ಆತನನ್ನು ಭಜಿಸಿದವನು ಎಂದಿಗೂ ಹಾಳಾಗುವದಿಲ್ಲ. ಆತನ ಭಕ್ತರು ಹೇಗಿರುತ್ತಾರೆಂದರೆ :

**ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ।**
**ಇತಿ ಮತ್ವಾ ಭಜಂತೇ ಮಾಂ ಬುಧಾ ಭಾವಸಮನ್ವಿತಾಃ ॥ ೧೦-೮**

ಅಹಂ-ನಾನು, ಸರ್ವಸ್ಯ-ಎಲ್ಲಕ್ಕೂ, ಪ್ರಭವಃ-ಉತ್ಪತ್ತಿಕಾರಣನು. ಮತ್ತಃ- ನನ್ನಿಂದಲೇ, ಸರ್ವಂ-ಎಲ್ಲವೂ, ಪ್ರವರ್ತತೇ - ಪ್ರವರ್ತಿಸುತ್ತದೆ. ಇತಿ - ಹೀಗೆಂದು, ಮತ್ವಾ-ತಿಳಿದು, ಭಾವಸಮನ್ವಿತಾಃ- ಭಗವದ್ಭಾವನೆಯಿಂದ ಕೂಡಿದವರಾದ, ಬುಧಾಃ-ವಿದ್ವಾಂಸರು, ಮಾಂ-ನನ್ನನ್ನು, ಭಜನ್ತೇ- ಭಜಿಸುತ್ತಾರೆ.

**ಮಚ್ಚಿತ್ತಾ ಮದ್ಗತಪ್ರಾಣಾಃ ಬೋಧಯನ್ತಃ ಪರಸ್ಪರಮ್ ।**
**ಕಥಯನ್ತಶ್ಚ ಮಾಂ ನಿತ್ಯಂ ತುಷ್ಯನ್ತಿ ಚ ರಮನ್ತಿ ಚ ॥ ೧೦-೯**

ಮಚ್ಚಿತ್ತಾಃ-ನನ್ನಲ್ಲೇ ಮನಸ್ಸುಳ್ಳವರಾಗಿ, ಮದ್ಗತಪ್ರಾಣಾಃ- ನನ್ನಲ್ಲೇ ಎಲ್ಲಾ ಇಂದ್ರಿಯವ್ಯಾಪಾರವುಳ್ಳವರಾಗಿ, ಪರಸ್ಪರಂ-ಒಬ್ಬರಿಗೊಬ್ಬರು, ಬೋಧಯನ್ತಃ- ತತ್ತ್ವವನ್ನು ತಿಳಿಯಿಸಿಕೊಡುತ್ತಾ, ಮಾಂ- ನನ್ನನ್ನು ಕುರಿತು, ನಿತ್ಯಂ-ಯಾವಾಗಲೂ, ಕಥಯನ್ತಶ್ಚ-ಮಾತಾಡಿಕೊಳ್ಳುತ್ತಲೂ, ತುಷ್ಯನ್ತಿ - ತೃಪ್ತರಾಗಿರುತ್ತಾರೆ. ರಮನ್ತಿ ಚ -ಮತ್ತು ಸಂತೋಷವುಳ್ಳವರಾಗಿರುತ್ತಾರೆ.

**ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ ।**
**ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥ ೧೦-೧೧**

ತೇಷಾಮೇವ - ಅವರಿಗಾಗಿಯೇ, ಅನುಕಂಪಾರ್ಥಂ- ದಯೆಯಿಂದ, ಅಹಂ-ನಾನು, ಅಜ್ಞಾನಜಂ-ಅಜ್ಞಾನದಿಂದುಂಟಾದ, ತಮಃ- ಕತ್ತಲೆಯನ್ನು , ಭಾಸ್ವತಾ-ಪ್ರಕಾಶಮಾನವಾದ, ಜ್ಞಾನದೀಪೇನ - ಜ್ಞಾನವೆಂಬ ದೀಪದಿಂದ, ಆತ್ಮಭಾವಸ್ಥಃ- ಅವರ ಅಂತಃಕರಣದಲ್ಲಿರುವವನಾಗಿ, ನಾಶಯಾಮಿ- ಹೋಗಲಾಡಿಸುವೆನು.

ಭಗವಂತನು ಎಲ್ಲಾ ಪ್ರಾಣಿಗಳ ಆತ್ಮನಾಗಿದ್ದರೂ ಕೆಲವು ಪದಾರ್ಥಗಳಲ್ಲಿ ವಿಶೇಷರೂಪದಿಂದ ಭಗವದ್ಭಕ್ತರ ಕಲ್ಯಾಣಕ್ಕಾಗಿ ತೋರಿಕೊಳ್ಳುವನು. ಇದನ್ನು ಬಲ್ಲವರು ವಿಭೂತಿಗಳೆನ್ನುವರು. ಉದಾಹರಣೆಗಾಗಿ ಒಂದೆರಡು ವಿಭೂತಿಗಳನ್ನು ತಿಳಿಸುತ್ತಾನೆ.

**ವೇದಾನಾಂ ಸಾಮವೇದೋಽಸ್ಮಿ ದೇವಾನಾಮಸ್ಮಿ ವಾಸವಃ ।**
**ಇಂದ್ರಿಯಾಣಾಂ ಮನಶ್ಚಾಸ್ಮಿ ಭೂತಾನಾಮಸ್ಮಿ ಚೇತನಾ ॥ ೧೦-೨೨**

ನಾನು, ವೇದಾನಾಂ-ವೇದಗಳಲ್ಲಿ, ಸಾಮವೇದಃ-ಸಾಮವೇದವು, ಅಸ್ಮಿ-ಆಗಿದ್ದೇನೆ ; ದೇವಾನಾಂ-ದೇವತೆಗಳಲ್ಲಿ, ವಾಸವಃ-ದೇವೇಂದ್ರನು, ಅಸ್ಮಿ-ಆಗಿರುವೆನು; ಚ -ಮತ್ತು, ಇಂದ್ರಿಯಾಣಾಂ-ಇಂದ್ರಿಯಗಳಲ್ಲಿ, ಮನಃ-ಮನಸ್ಸು, ಅಸ್ಮಿ- ಆಗಿರುವೆನು ; ಭೂತಾನಾಂ - ಪ್ರಾಣಿಗಳಲ್ಲಿ, ಚೇತನಾ- ಬುದ್ಧಿವೃತ್ತಿಯು, ಅಸ್ಮಿ- ಆಗಿದ್ದೇನೆ.

ಹೀಗೆ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವಾಗಿ ವಿಂಗಡಿಸಿಕೊಂಡಿರುವ ನನ್ನ ವಿಭೂತಿಗಳು ಈ ಪ್ರಪಂಚದಲ್ಲಿ ಲೆಕ್ಕವಿಲ್ಲದಷ್ಟಿವೆ. ವಿಭೂತಿಗಳನ್ನು ಗುರುತಿಸುವದು ಹೇಗೆಂದರೆ :

**ಯದ್ಯದ್ ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।**
**ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಮ್ ॥ ೧೦-೪೧**

ಯದ್ಯದ್-ಯಾವ ಯಾವ, ಸತ್ವಂ-ಪದಾರ್ಥವು, ವಿಭೂತಿಮತ್ -

ಮಹಿಮಾಯುಕ್ತವಾಗಿರುವದೋ, ಶ್ರೀಮತ್- ಸಂಪದ್ಯುಕ್ತವಾಗಿರುವದೋ, ಊರ್ಜಿತಮೇವ ವಾ- ಉತ್ಸಾಹೋಪೇತವಾಗಿರುವದೋ, ತತ್ತದೇವ- ಅವವು ಗಳನ್ನೇ, ತ್ವಂ- ನೀನು, ಮಮ-ನನ್ನ, ತೇಜೋಂಶಸಂಭವಮ್ ತೇಜಸ್ಸಿನ ಏಕದೇಶದಿಂದ ಉಂಟಾದವುಗಳೆಂದು, ಅವಗಚ್ಛ- ನಿಶ್ಚಯಿಸಿ ತಿಳಿಯುವನಾಗು.

ಹೀಗೆ ಉಪದೇಶಿಸಿದ ಭಗವಂತನನ್ನು ಕುರಿತು ಅರ್ಜುನನು ''ಎಲೈ ಕೃಷ್ಣನೆ, ನಾನು ನಿನ್ನ ವಿಶ್ವರೂಪವನ್ನು ನೋಡಲು ಬಯಸುತ್ತೇನೆ. ಕೃಪೆ ಮಾಡಿ ತೋರಿಸು'' - ಎಂದು ಕೇಳಲಾಗಿ ಭಗವಂತನು :

**ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ ।**
**ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ ॥ ೧೧-೫**

ಪಾರ್ಥ-ಎಲೈ ಅರ್ಜುನನೆ, ಶತಶಃ-ನೂರುಗಟ್ಟಳೆಯ, ಅಥ- ಮತ್ತು ಸಹಸ್ರಶಃ-ಸಾವಿರಗಟ್ಟಳೆಯ, ನಾನಾವಿಧಾನಿ-ನಾನಾರೀತಿಯ, ದಿವ್ಯಾನಿ-ಅಪ್ರಾಕೃತವಾದ, ಚ-ಮತ್ತು, ನಾನಾವರ್ಣಾಕೃತೀನಿ - ಅನೇಕ ಬಣ್ಣಗಳ ಅವಯವಗಳಿಂದ ಕೂಡಿದ, ಮೇ - ನನ್ನ, ರೂಪಾಣಿ- ಆಕಾರಗಳನ್ನು, ಪಶ್ಯ- ನೋಡು.

ಹೀಗೆನ್ನುತ್ತಾ ಭಗವಂತನು ತನ್ನ ವಿಶ್ವರೂಪವನ್ನು ಇಡೀ ಬ್ರಹ್ಮಾಂಡವನ್ನೆಲ್ಲ ವ್ಯಾಪಿಸಿ ಇನ್ನೂ ಮಿಗಿಲಾಗಿದ್ದ ನಾನಾರೂಪಗಳಿಂದ ಕೂಡಿದ ಅತ್ಯದ್ಭುತವಾದ ರೀತಿಯಿಂದ - ತೋರಿಸಿ ಅರ್ಜುನನಿಗೆ ದಿವ್ಯ ದೃಷ್ಟಿಯನ್ನು ಕೊಟ್ಟು 'ನೋಡು' ಎಂದನು. ಆಗ ಭಗವಂತನ ರೂಪವು ಹೇಗಿತ್ತೆಂದರೆ :-

**ಅನೇಕವಕ್ತ್ರನಯನಮನೇಕಾದ್ಭುತದರ್ಶನಮ್ ।**
**ಅನೇಕದಿವ್ಯಾಭರಣಂ ದಿವ್ಯಾನೇಕೋದ್ಯತಾಯುಧಮ್ ॥ ೧೧-೧೦**

ಅನೇಕವಕ್ತ್ರನಯನಂ-ನಾನಾಮುಖಗಳೂ ಕಣ್ಣುಗಳೂ ಉಳ್ಳ, ಅನೇಕಾದ್ಭುತದರ್ಶನಮ್- ಆಶ್ಚರ್ಯಕರವಾದ ಅನೇಕ ರೂಪಗಳುಳ್ಳ, ಅನೇಕ ದಿವ್ಯಾಭರಣಂ-ಲೆಕ್ಕವಿಲ್ಲದಷ್ಟು ಹೊಳೆಯುವ ಆಭರಣಗಳುಳ್ಳ, ದಿವ್ಯಾ

ನೇಕೋದ್ಯತಾಯುಧಮ್-ದಿವ್ಯವಾದ ಅನೇಕ ಸಂಖ್ಯೆಯ ಮೇಲಕ್ಕೆತ್ತಿದ ಆಯುಧಗಳುಳ್ಳ (ವಿಶ್ವರೂಪವನ್ನು ಅರ್ಜುನನು ಕಂಡನು).

ಭಗವಂತನ ಇಂಥ ವಿರಾಡ್ರೂಪವನ್ನು ಕಂಡು ಅರ್ಜುನನು ಸ್ತುತಿಸ ತೊಡಗಿದನು. ಹೇಗೆಂದರೆ:

**ಪಶ್ಯಾಮಿ ದೇವಾಂಸ್ತವ ದೇವ ದೇಹೇ**
**ಸರ್ವಾಂಸ್ತಥಾ ಭೂತವಿಶೇಷಸಂಘಾನ್ ।**
**ಬ್ರಹ್ಮಾಣಮೀಶಂ ಕಮಲಾಸನಸ್ಥಂ**
**ಋಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾನ್ ॥ ೧೧-೧೫**

ದೇವ - ಎಲೈ ಸ್ವಾಮಿಯೆ, ತವ - ನಿನ್ನ, ದೇಹೇ - ದೇಹದಲ್ಲಿ, ದೇವಾನ್-ದೇವತೆಗಳನ್ನು, ತಥಾ-ಹಾಗೆಯೇ, ಸರ್ವಾನ್- ಎಲ್ಲಾ, ಭೂತ ವಿಶೇಷಸಂಘಾನ್- ಚೇತನಾಚೇತನಪ್ರಾಣಿಗಳ ಸಮೂಹವನ್ನೂ, ಕಮಲಾ ಸನಸ್ಥಂ- ಕಮಲದಲ್ಲಿಕುಳಿತಿರುವ, ಈಶಂ-ಒಡೆಯನಾದ, ಬ್ರಹ್ಮಾ ಣಂ- ಹಿರಣ್ಯ ಗರ್ಭನನ್ನೂ, ಸರ್ವಾನ್-ಎಲ್ಲಾ, ಋಷೀನ್-ಋಷಿಗಳನ್ನೂ, ದಿವ್ಯಾನ್- ದ್ಯುಲೋಕದಲ್ಲಿರುವ, ಉರಗಾನ್-ಹಾವುಗಳನ್ನೂ ಪಶ್ಯಾಮಿ- ನೋಡುತ್ತಿದೇನೆ.

ಹೀಗೆ ಸ್ತುತಿಸುತ್ತಾ ಅರ್ಜುನನು ತನ್ನ ಅಲ್ಪತ್ವವನ್ನೂ ಭಗವಂತನ ಸರ್ವಶಕ್ತಿತ್ವಸರ್ವೈಶ್ವರ್ಯತ್ವಗಳನ್ನೂ ಕಂಡು ಪುಳಕಿತನಾದನು. ಹಾಗೂ ಭಯಂಕರವಾದ ಆತನ ಉಗ್ರರೂಪವನ್ನು ಕಂಡು ನಡುಗಿದನು. ಮತ್ತೆ ಧೈರ್ಯವನ್ನು ತಂದುಕೊಂಡು ಭಗವಂತನನ್ನು ಸ್ತುತಿಸಿದನು. ಹೇಗೆಂದರೆ:

**ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ**
**ಜಗತ್ ಪ್ರಹೃಷ್ಯತ್ಯನುರಜ್ಯತೇ ಚ ।**
**ರಕ್ಷಾಂಸಿ ಭೀತಾನಿ ದಿಶೋ ದ್ರವನ್ತಿ**
**ಸರ್ವೇ ನಮಸ್ಯನ್ತಿ ಚ ಸಿದ್ಧಸಂಘಾಃ ॥ ೧೧-೩೬**

ಹೃಷಿಕೇಶ-ಎಲೈ ಕೃಷ್ಣನೆ, ತವ-ನಿನ್ನ, ಪ್ರಕೀರ್ತ್ಯಾ-ಸ್ತೋತ್ರದಿಂದ, ಜಗತ್-ಲೋಕವು, ಪ್ರಹೃಷ್ಯತಿ-ಸಂತೋಷಪಡುತ್ತದೆ ; ಚ - ಮತ್ತು, ಅನು ರಜ್ಯತೇ - ಅನುರಾಗವನ್ನೂ ಹೊಂದುತ್ತದೆ. ಇದು, ಸ್ಥಾನೇ- ಯುಕ್ತವೇ.

ಭೀತಾನಿ- ಭಯಗೊಂಡ, ರಕ್ಷಾಂಸಿ- ರಾಕ್ಷಸರುಗಳು, ದಿಶಃ- ದಿಕ್ಕುಗಳಿಗೆ, ದ್ರವನ್ತಿ- ಓಡಿಹೋಗುತ್ತಾರೆ, ಚ- ಮತ್ತು, ಸರ್ವೇ- ಎಲ್ಲಾ, ಸಿದ್ಧಸಂಘಾಃ- ಸಿದ್ಧರುಗಳ ಗುಂಪು, ನಮಸ್ಯನ್ತಿ - ನಮಸ್ಕರಿಸುತ್ತಾರೆ.

ನಮಃ ಪುರಸ್ತಾದಥ ಪೃಷ್ಠತಸ್ತೇ
ನಮೋಽಸ್ತು ತೇ ಸರ್ವತ ಏವ ಸರ್ವ ।
ಅನಂತವೀರ್ಯಾಮಿತವಿಕ್ರಮಸ್ತ್ವಂ
ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ ॥ ೧೧-೪೦

ತೇ- ನಿನಗೆ, ಪುರಸ್ತಾತ್- ಮುಂದುಗಡೆ, ಅಥ- ಮತ್ತು, ಪೃಷ್ಠತಃ- ಹಿಂದುಗಡೆ, ನಮಃ- ನಮಸ್ಕಾರವು. ತೇ- ನಿನಗೆ, ಸರ್ವತಃ- ಎಲ್ಲಾ ಕಡೆ ಯಿಂದಲೂ, ನಮಃ- ನಮಸ್ಕಾರವು, ಅಸ್ತು- ಆಗಲಿ. ಸರ್ವ- ಎಲೈ ಸರ್ವ ವ್ಯಾಪಕನೆ, ಅನಂತವೀರ್ಯ- ಅಪರಿಮಿತಶಕ್ತಿಯುಳ್ಳವನೆ, ತ್ವಂ- ನೀನು, ಅಮಿತ ವಿಕ್ರಮಃ- ಅಪಾರವಾದ ಪರಾಕ್ರಮವುಳ್ಳವನು. ಸರ್ವಂ- ಎಲ್ಲವನ್ನೂ, ಸಮಾಪ್ನೋಷಿ- ವ್ಯಾಪಿಸಿರುವೆ. ತತಃ- ಇನ್ನು, ಸರ್ವಂ- ಎಲ್ಲವೂ, ಅಸಿ- ಆಗಿರುತ್ತೀಯೆ.

ಹೀಗೆ ಅರ್ಜುನನು ಸ್ತೋತ್ರಮಾಡಿದ ಅನಂತರ ಭಗವಂತನು ವಿಶ್ವ ರೂಪವನ್ನು ಹಿಂತೆಗೆದುಕೊಂಡು ತನ್ನ ಹಿಂದಿನ ರೂಪ(ಕೃಷ್ಣರೂಪ) ದಿಂದಲೇ ತೋರಿಕೊಂಡನು. ಮತ್ತು ಅರ್ಜುನನ್ನು ಕುರಿತು 'ಎಲೈ ಪಾರ್ಥನೆ, ಈ ನನ್ನ ರೂಪವು ನೋಡಲು ಎಲ್ಲರಿಗೂ ದೊರೆಯಲಾರದು. ಅನನ್ಯಭಕ್ತರಿಗೆ ಮಾತ್ರ ಇದನ್ನು ತೋರಿಸುವೆನು. ಯಾವನು :

ಮತ್ಕರ್ಮಕೃತ್ ಮತ್ಪರಮಃ ಮದ್ಭಕ್ತಃ ಸಂಗವರ್ಜಿತಃ ।
ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ ॥ ೧೧-೫೫

ಪಾಂಡವ- ಎಲೈ ಪಾಂಡವನೆ, ಯಃ- ಯಾವನು, ಮತ್ಕರ್ಮಕೃತ್- ನನಗಾಗಿ ಕರ್ಮಗಳನ್ನು ಮಾಡುವನೋ, ಮತ್ಪರಮಃ- ನಾನೇ ಗತಿಯೆಂದು ನಂಬಿರುವನೋ, ಮದ್ಭಕ್ತಃ- ನನ್ನ ಭಕ್ತನಾಗಿರುವನೋ, ಸಂಗವರ್ಜಿತಃ- ಧನಪುತ್ರಾದಿಗಳಲ್ಲಿ ಅಭಿಮಾನವಿಲ್ಲದವನಾಗಿರುವನೋ, ಸರ್ವಭೂತೇಷು- ಎಲ್ಲಾ

ಪ್ರಾಣಿಗಳಲ್ಲಿಯೂ, ನಿರ್ವೈರಃ-ದ್ವೇಷರಹಿತನಾಗಿರುವನೋ, ಸಃ-ಅವನು, ಮಾಂ-ನನ್ನನ್ನು, ಏತಿ -ಹೊಂದುವನು

ಇಂಥ ಅನನ್ಯವಾದ ಭಕ್ತಿಯೋಗವನ್ನು ನೀನು ಸಂಪಾದಿಸಬೇಕಾದರೆ ಕ್ರಮವಾಗಿ ಪ್ರಯತ್ನಿಸಬೇಕು. ಅದಕ್ಕಾಗಿ :

**ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।**
**ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥ ೧೨-೮**

ಮಯ್ಯೇವ-ನನ್ನಲ್ಲಿಯೇ, ಮನಃ-ಮನಸ್ಸನ್ನು, ಆಧತ್ಸ್ವ-ಇಡು. ಮಯಿ-ನನ್ನಲ್ಲಿ, ಬುದ್ಧಿಂ-ಬುದ್ಧಿಯನ್ನು, ನಿವೇಶಯ-ನೆಲೆಗೊಳಿಸು. ಅತ ಊರ್ಧ್ವಂ-ಆಮೇಲೆ, ಮಯ್ಯೇವ-ನನ್ನಲ್ಲಿಯೇ, ನಿವಸಿಷ್ಯಸಿ-ವಾಸಮಾಡುವೆ. ನ ಸಂಶಯಃ-ಈ ವಿಷಯದಲ್ಲಿ ಸಂದೇಹವಿಲ್ಲ.

ಆದ್ದರಿಂದ ಜ್ಞಾನವನ್ನು ಗುರಿಯಾಗಿಟ್ಟುಕೊಂಡು ಕರ್ಮಫಲತ್ಯಾಗದಿಂದ ಪ್ರಾರಂಭಿಸಿ ಸೋಪಾನಕ್ರಮದಿಂದ ಸಾಧನಗಳನ್ನು ಮಾಡುತ್ತಿರು. ಭಕ್ತರನ್ನು ಮೇಲ್ಪಂಕ್ತಿಯಾಗಿಟ್ಟುಕೊ ; ನನ್ನ ಭಕ್ತನು ಹೇಗಿರುವನೆಂದರೆ :

**ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ ।**
**ಮಯ್ಯರ್ಪಿತಮನೋಬುದ್ಧಿಃ ಯೋ ಮದ್ಭಕ್ತಃ ಸ ಮೇ ಪ್ರಿಯಃ ॥**
**೧೨-೧೪**

ಯಃ - ಯಾವ, ಯೋಗೀ - ಯೋಗಿಯು, ಸತತಂ - ಯಾವಾಗಲೂ, ಸಂತುಷ್ಟಃ- ತೃಪ್ತನಾಗಿದ್ದುಕೊಂಡು, ಯತಾತ್ಮಾ - ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡವನಾಗಿ,· ದೃಢನಿಶ್ಚಯಃ - ಬಲವಾದ ನಿಶ್ಚಯವುಳ್ಳವನಾಗಿ, ಮಯ್ಯರ್ಪಿತಮನೋಬುದ್ಧಿಃ - ನನ್ನಲ್ಲಿಯೇ ಇಡಲ್ಪಟ್ಟ ಮನಸ್ಸುಬುದ್ಧಿಯುಳ್ಳವನಾಗಿರುವನೋ, ಸಃ-ಆ, ಮದ್ಭಕ್ತಃ- ನನ್ನ ಭಕ್ತನು, ಮೇ - ನನಗೆ, ಪ್ರಿಯಃ - ಪ್ರಿಯನು.

ಹೀಗೆ ನನ್ನನ್ನು ಉಪಾಸನೆಮಾಡುವ ಭಕ್ತರು ನನಗೆ ಬಹು ಪ್ರಿಯರು. ಇಂಥ ಭಕ್ತರು ಯಾವ ಜ್ಞಾನವನ್ನು ಪಡೆದುಕೊಂಡದ್ದರಿಂದ ನನಗೆ ಪ್ರಿಯರಾಗಿರುವರೋ ಆ ತತ್ತ್ವಜ್ಞಾನವನ್ನು ನಿನಗೆ ಹೇಳುವೆನು

ಕೇಳು. ಈ ಶರೀರವೇ ಕ್ಷೇತ್ರವು ; ಇದನ್ನು ತಿಳಿಯುವವನೇ ಕ್ಷೇತ್ರಜ್ಞನು. ಆ ಕ್ಷೇತ್ರಜ್ಞನ ನಿಜಸ್ವರೂಪವೇನೆಂದರೆ :

**ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ ।**
**ಕ್ಷೇತ್ರಕ್ಷೇತ್ರಜ್ಞಯೋರ್ಜ್ಞಾನಂ ಯತ್ತಜ್ಜ್ಞಾನಂ ಮತಂ ಮಮ ॥**
**೧೩-೨**

ಭಾರತ- ಎಲೈ ಭರತವಂಶೋತ್ಪನ್ನನೆ, ಸರ್ವಕ್ಷೇತ್ರೇಷು -ಎಲ್ಲಾ ಶರೀರಗಳಲ್ಲಿಯೂ ಇರುವ, ಕ್ಷೇತ್ರಜ್ಞಂ ಚಾಪಿ-ಕ್ಷೇತ್ರಜ್ಞನನ್ನು ಕೂಡ, ಮಾಂ-ಅಸಂಸಾರಿಯಾದ ಶ್ರೀಮನ್ನಾರಾಯಣನಾದ ನಾನೇ ಎಂದು, ವಿದ್ಧಿ-ತಿಳಿ. ಕ್ಷೇತ್ರಕ್ಷೇತ್ರಜ್ಞಯೋಃ-ಕ್ಷೇತ್ರ ಮತ್ತು ಕ್ಷೇತ್ರಜ್ಞರ, ಯತ್ ಜ್ಞಾನಂ- ಯಾವ ಸಮ್ಯಗ್‌ಜ್ಞಾನವಿದೆಯೋ, ತತ್-ಆ, ಜ್ಞಾನಂ- ಜ್ಞಾನವು, ಮಮ- ನನಗೆ ಮತಂ-ಒಪ್ಪಿಗೆಯಾದದ್ದು.

ಇಂಥ ಜ್ಞಾನದಿಂದ ಅರಿತುಕೊಳ್ಳಬೇಕಾದ ಬ್ರಹ್ಮದ ಸ್ವರೂಪವು ಹೇಗಿರುವದೆಂದರೆ :-

**ಸರ್ವತಃ ಪಾಣಿಪಾದಂ ತತ್ ಸರ್ವತೋಽಕ್ಷಿಶಿರೋಮುಖಮ್ ।**
**ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥ ೧೩-೧೩**

ತತ್-ಆ ಬ್ರಹ್ಮವು, ಸರ್ವತಃ-ಎಲ್ಲೆಲ್ಲಿಯೂ, ಪಾಣಿಪಾದಂ-ಕೈ ಕಾಲುಗಳುಳ್ಳದ್ದು. ಸರ್ವತಃ-ಎಲ್ಲೆಲ್ಲಿಯೂ, ಅಕ್ಷಿಶಿರೋಮುಖಂ - ಕಣ್ಣು, ತಲೆ, ಮುಖಗಳುಳ್ಳದ್ದು. ಸರ್ವತಃ - ಎಲ್ಲೆಲ್ಲಿಯೂ, ಶ್ರುತಿಮತ್-ಕಿವಿಗಳುಳ್ಳದ್ದು, ಲೋಕೇ-ಈ ಪ್ರಪಂಚದಲ್ಲಿ (ಅದು), ಸರ್ವಂ-ಎಲ್ಲವನ್ನೂ, ಆವೃತ್ಯ-ವ್ಯಾಪಿಸಿಕೊಂಡು, ತಿಷ್ಠತಿ-ಇರುವದು.

ಇದೇ ತತ್ತ್ವವೇ ಮತ್ತೂ ಹೇಗಿರುವದೆಂದರೆ :-

**ಉಪದ್ರಷ್ಟಾಽನುಮನ್ತಾ ಚ ಭರ್ತಾ ಭೋಕ್ತಾ ಮಹೇಶ್ವರಃ ।**
**ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ ಪುರುಷಃ ಪರಃ ॥ ೧೩-೨೨**

ಅಸ್ಮಿನ್-ಈ, ದೇಹೇ-ಶರೀರದಲ್ಲಿರುವ ಪುರುಷಃ-ಆತ್ಮನು, ಉಪ ದ್ರಷ್ಟಾ-ಎಲ್ಲಾ ವಿಷಯಗಳನ್ನೂ ನೇರಾಗಿ ನೋಡುವವನೂ, ಅನುಮನ್ತಾ - ಆಯಾ

ಕ್ರಿಯೆಗಳನ್ನು ಅನುಮೋದಿಸುವವನೂ, ಭರ್ತಾ - ಎಲ್ಲವನ್ನೂ ಧರಿಸಿರುವವನೂ, ಭೋಕ್ತಾ - ಎಲ್ಲವನ್ನೂ ಅನುಭವಿಸುವವನೂ, ಮಹೇಶ್ವರಃ - ಎಲ್ಲಕ್ಕೂ ಒಡೆಯನೂ, ಪರಃ - ಹೆಚ್ಚಿನವನೂ, ಪರಮಾತ್ಮೇತಿ- ಪರಮಾತ್ಮನೆಂದೂ, ಉಕ್ತಃ- ಹೇಳಲ್ಪಟ್ಟಿರುವನು.

ಇಂಥ ಆತ್ಮನನ್ನು ಕಂಡುಕೊಳ್ಳಲು ಉಪಾಯಗಳಾವುವೆಂದರೆ :-

**ಧ್ಯಾನೇನಾತ್ಮನಿ ಪಶ್ಯನ್ತಿ ಕೇಚಿದಾತ್ಮಾನಮಾತ್ಮನಾ ।**
**ಅನ್ಯೇ ಸಾಂಖ್ಯೇನ ಯೋಗೇನ ಕರ್ಮಯೋಗೇನ ಚಾಪರೇ ॥**
**೧೩-೨೪**

**ಅನ್ಯೇ ತ್ವೇವಮಜಾನನ್ತಃ ಶ್ರುತ್ವಾಽನ್ಯೇಭ್ಯ ಉಪಾಸತೇ ।**
**ತೇಽಪಿ ಚಾತಿತರನ್ತ್ಯೇವ ಮೃತ್ಯುಂ ಶ್ರುತಿಪರಾಯಣಾಃ ॥ ೧೩-೨೫**

ಕೇಚಿತ್ - ಕೆಲವರು, ಧ್ಯಾನೇನ - ಏಕಾಗ್ರತೆಯ ಚಿಂತನೆಯಿಂದ, ಆತ್ಮಾನಂ- ಆತ್ಮನನ್ನು, ಆತ್ಮನಾ - ತನ್ನಿಂದಲೇ, ಆತ್ಮನಿ- ಬುದ್ಧಿಯಲ್ಲಿ, ಪಶ್ಯನ್ತಿ - ಕಂಡುಕೊಳ್ಳುತ್ತಾರೆ. ಅನ್ಯೇ - ಮತ್ತೆ ಕೆಲವರು, ಸಾಂಖ್ಯೇನ ಯೋಗೇನ - ಪ್ರಕೃತಿಪುರುಷವಿವೇಕರೂಪವಾದ ನಿಶ್ಚಯವೆಂಬ ಉಪಾಯದಿಂದ, ಅಪರೇ - ಮತ್ತೆ ಕೆಲವರು, ಕರ್ಮಯೋಗೇನ -ಕರ್ಮಯೋಗದಿಂದ (ತಿಳಿಯಲೆಳಸುತ್ತಾರೆ).

ಅನ್ಯೇ ತು - ಮತ್ತೆ ಕೆಲವರಾದರೊ, ಏವಂ - ಹೀಗೆ, ಅಜಾನನ್ತಃ - ತಿಳಿಯದವರಾಗಿ, ಅನ್ಯೇಭ್ಯಃ - ಆಚಾರ್ಯರು(ಗುರು)ಗಳಿಂದ, ಶ್ರುತ್ವಾ - ಕೇಳಿ ತಿಳಿದುಕೊಂಡು, ಉಪಾಸತೇ - ಉಪಾಸನೆಮಾಡುತ್ತಾರೆ. ಶ್ರುತಿಪರಾಯಣಾಃ- ಮೋಕ್ಷಸಾಧನವಾದ ಗುರೂಪದೇಶಶ್ರವಣದಲ್ಲಿಯೇ ತತ್ಪರರಾದ, ತೇಽಪಿ ಚ - ಅವರೂ ಕೂಡ, ಮೃತ್ಯುಂ- ಸಂಸಾರವನ್ನು, ತರನ್ತ್ಯೇವ- ದಾಟಿಯೇದಾಟುವರು.

ಹೀಗೆ ಯಾವರೀತಿಯಿಂದಲಾದರೂ ಪರಮಾತ್ಮನನ್ನು ಕಂಡುಕೊಂಡವನು ಸಮ್ಯಗ್ದರ್ಶಿಯೆನಿಸುವನು. ಜ್ಞಾನಿಯಾದ ಅವನ ಅನುಭವವು ಹೇಗಿರುವದೆಂದರೆ :-

**ಸಮಂ ಸರ್ವೇಷು ಭೂತೇಷು ತಿಷ್ಠನ್ತಂ ಪರಮೇಶ್ವರಮ್ ।**
**ವಿನಶ್ಯತ್ಸ್ವವಿನಶ್ಯನ್ತಂ ಯಃ ಪಶ್ಯತಿ ಸ ಪಶ್ಯತಿ ॥ ೧೩-೨೭**

ಯಃ - ಯಾವನು, ಸರ್ವೇಷು ಭೂತೇಷು - ಎಲ್ಲಾ ಪ್ರಾಣಿಗಳಲ್ಲಿಯೂ, ಸಮಂ- ಸಮನಾಗಿ, ತಿಷ್ಠನ್ತಂ - ಇರುವ, ವಿನಶ್ಯತ್ಸು - ನಾಶವಾಗುತ್ತಿರುವ ಭೂತಗಳಲ್ಲಿ, ಅವಿನಶ್ಯನ್ತಂ - ನಾಶವಾಗದೆ ಇದ್ದುಕೊಂಡಿರುವ, ಪರಮೇಶ್ವರಂ - ಪರಮೇಶ್ವರನನ್ನು, ಪಶ್ಯತಿ - ಕಾಣುವನೋ, ಸಃ- ಅವನೇ, ಪಶ್ಯತಿ - ನಿಜವಾಗಿ ತತ್ತ್ವವನ್ನು ಕಂಡವನಾಗಿರುತ್ತಾನೆ.

ಈ ಬ್ರಹ್ಮತತ್ತ್ವವನ್ನು ಕಂಡುಕೊಳ್ಳಲು ಸಾಧಕನಿಗೆ ತ್ರಿಗುಣಗಳೇ ಅಡ್ಡಿಯಾಗಿವೆ. ಅವುಗಳು ಯಾವವೆಂದರೆ :-

**ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।**
**ನಿಬಧ್ನನ್ತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್ ॥ ೧೪-೫**

**ತತ್ರ ಸತ್ತ್ವಂ ನಿರ್ಮಲತ್ವಾತ್ ಪ್ರಕಾಶಕಮನಾಮಯಮ್ ।**
**ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ ॥ ೧೪-೬**

**ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಮ್ ।**
**ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಮ್ ॥ ೧೪-೭**

**ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಮ್ ।**
**ಪ್ರಮಾದಾಲಸ್ಯನಿದ್ರಾಭಿಸ್ತನ್ನಿಬಧ್ನಾತಿ ಭಾರತ ॥ ೧೪-೮**

ಮಹಾಬಾಹೋ - ಎಲೈ ಮಹಾಬಾಹುವೆ, ಪ್ರಕೃತಿಸಂಭವಾಃ - ಪ್ರಕೃತಿಯಿಂದುಂಟಾದ, ಸತ್ತ್ವಂರಜಸ್ತಮ ಇತಿ - ಸತ್ತ್ವ ರಜಸ್ಸು ತಮಸ್ಸುಗಳೆಂಬ, ಗುಣಾಃ - ಗುಣಗಳು, ದೇಹೇ- ದೇಹದಲ್ಲಿ, ಅವ್ಯಯಂ- ನಾಶರಹಿತನಾದ, ದೇಹಿನಂ - ಶರೀರಿಯಾದ ಈ ಆತ್ಮನನ್ನು, ನಿಬಧ್ನನ್ತಿ - ಕಟ್ಟಿಹಾಕುತ್ತವೆ.

ತತ್ರ - ಅವುಗಳಲ್ಲಿ, ಸತ್ತ್ವಂ-ಸತ್ತ್ವಗುಣವು, ನಿರ್ಮಲತ್ವಾತ್ - ಶುದ್ಧವಾಗಿರುವದರಿಂದ, ಪ್ರಕಾಶಕಮ್ - ತೇಜೋರೂಪವಾಗಿಯೂ, ಅನಾಮಯಂ - ನಿರುಪದ್ರವ(ದೋಷವಿಲ್ಲದ್ದು)ವಾಗಿಯೂ, ಇದೆ. ಅನಘ -

ಎಲೈ ಪಾಪರಹಿತನೆ, ಇದು ಸುಖಸಂಗೇನ - ಸುಖದ ಆಶೆಯಿಂದಲೂ, ಜ್ಞಾನಸಂಗೇನ - ವಿದ್ಯಾರೂಪವಾದ ತಿಳಿವಳಿಕೆಯ ಆಶೆಯಿಂದಲೂ, ಬಧ್ನಾತಿ - ಕಟ್ಟಿಹಾಕುತ್ತದೆ.

ತೃಷ್ಣಾಸಂಗಸಮುದ್ಭವಮ್ - ಬಯಕೆಯ ಮತ್ತು ಪ್ರೀತಿಯ ಸಂಬಂಧದಿಂದ ಉಂಟಾದ, ರಜಃ - ರಜೋಗುಣವು, ರಾಗಾತ್ಮಕಂ - ಅಂಟಿಕೊಳ್ಳುವ ಸ್ವಭಾವದ್ದೆಂದು, ವಿದ್ಧಿ - ತಿಳಿ. ಕೌಂತೇಯ - ಎಲೈ ಕುಂತೀಪುತ್ರನೆ, ತತ್ - ಅದು, ದೇಹಿನಂ - ಆತ್ಮನನ್ನು, ಕರ್ಮಸಂಗೇನ - ಕರ್ಮಗಳಲ್ಲಿ ಅಂಟಿಕೊಳ್ಳುವಿಕೆಯಿಂದ, ನಿಬಧ್ನಾತಿ - ಕಟ್ಟಿಹಾಕುವದು.

ತಮಸ್ತು - ತಮೋಗುಣವಾದರೊ, ಅಜ್ಞಾನಜಂ - ಅಜ್ಞಾನದಿಂದ ಉಂಟಾದದ್ದೆಂದು, ವಿದ್ಧಿ - ತಿಳಿ. ಇದು ಸರ್ವದೇಹಿನಾಂ - ಎಲ್ಲಾ ಪ್ರಾಣಿಗಳಿಗೂ, ಮೋಹನಂ - ಅವಿವೇಕವನ್ನುಂಟುಮಾಡುವದು. ಭಾರತ - ಎಲೈ ಭರತವಂಶೋತ್ಪನ್ನನೆ, ತತ್ - ಅದು, ಪ್ರಮಾದಾಲಸ್ಯನಿದ್ರಾಭಿಃ - ಮೈಮರೆಯುವದು, ಸೋಮಾರಿತನ, ನಿದ್ರೆ - ಇವುಗಳಿಂದ, ನಿಬಧ್ನಾತಿ - ಕಟ್ಟಿಹಾಕುವದು.

ಇನ್ನು ಗುಣಗಳಿಂದ ಉಂಟಾಗುವ ಕಾರ್ಯಗಳಾವುವೆಂದರೆ :

**ಸತ್ತ್ವಾತ್ ಸಂಜಾಯತೇ ಜ್ಞಾನಂ ರಜಸೋ ಲೋಭ ಏವ ಚ ।**
**ಪ್ರಮಾದಮೋಹೌ ತಮಸೋ ಭವತೋಽಜ್ಞಾನಮೇವ ಚ ॥೧೪-೧೭**

ಸತ್ತ್ವಾತ್ - ಸತ್ತ್ವಗುಣದಿಂದ, ಜ್ಞಾನಂ - ಜ್ಞಾನವು, ಸಂಜಾಯತೇ- ಉಂಟಾಗುತ್ತದೆ. ರಜಸಃ - ರಜೋಗುಣದಿಂದ, ಲೋಭ ಏವ ಚ - ಜಿಪುಣತನವು ಉಂಟಾಗುವದು. ತಮಸಃ - ತಮೋಗುಣದಿಂದ, ಪ್ರಮಾದಮೋಹೌ- ಅವಿವೇಕಮೋಹಗಳೂ, ಅಜ್ಞಾನಮೇವ ಚ - ಮತ್ತು ತಪ್ಪುತಿಳಿವಳಿಕೆಯೂ, ಭವತಃ- ಆಗುವವು.

ಹೀಗೆ ತಪ್ಪುತಿಳಿವಳಿಕೆಯಿಂದ ಗುಣಗಳ ಕಾರ್ಯವನ್ನೇ ತನ್ನ ಕಾರ್ಯವೆಂದು ಭ್ರಮಿಸಿ ಸುಖದುಃಖಮೋಹಪರವಶನಾಗಿ ಜೀವನು ತೊಳಲುತ್ತಿರುವನು. ಇಂಥ ಅನರ್ಥದಿಂದ ಪಾರಾಗಲು ಸಂಪಾದಿಸಬೇಕಾಗಿರುವ ಸಮ್ಯಗ್ಜ್ಞಾನವು ಯಾವದೆಂದರೆ -

**ನಾನ್ಯಂ ಗುಣೇಭ್ಯಃ ಕರ್ತಾರಂ ಯದಾ ದ್ರಷ್ಟಾಽನುಪಶ್ಯತಿ ।**
**ಗುಣೇಭ್ಯಶ್ಚ ಪರಂ ವೇತ್ತಿ ಮದ್ಭಾವಂ ಸೋಽಧಿಗಚ್ಛತಿ ॥ ೧೪-೧೯**

ಯದಾ - ಯಾವಾಗ, ದ್ರಷ್ಟಾ - ವಿವೇಕಿಯಾದ ಸಾಧಕನು, ಗುಣೇಭ್ಯಃ - ಗುಣಗಳಿಗಿಂತ, ಅನ್ಯಂ - ಬೇರೆಯ, ಕರ್ತಾರಂ - ಕರ್ತೃವನ್ನು, ನಾನುಪಶ್ಯತಿ - ನೋಡುವದಿಲ್ಲವೋ (ಎಂದರೆ ಗುಣಗಳೇ ಕರ್ತೃಗಳೆಂದು ತಿಳಿಯುವನೋ), ಚ- ಮತ್ತು ತನ್ನನ್ನು, ಗುಣೇಭ್ಯಃ - ಗುಣಗಳಿಗಿಂತ, ಪರಂ - ಬೇರೆಯವನನ್ನಾಗಿ, ವೇತ್ತಿ - ತಿಳಿಯುವನೋ, ಸಃ - ಅವನು, ಮದ್ಭಾವಂ - ನನ್ನ ಸ್ವರೂಪವನ್ನು, ಅಧಿಗಚ್ಛತಿ - ಹೊಂದುವನು.

ಇಂಥ ದಿವ್ಯಜ್ಞಾನದಿಂದ ಗುಣಗಳನ್ನು ಮೀರಿ ಭಗವತ್ತತ್ತ್ವವನ್ನೇ ಕಂಡುಕೊಳ್ಳಲು ಮುಖ್ಯಸಾಧನವು ಯಾವದೆಂದರೆ :-

**ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।**
**ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥ ೧೪-೨೬**

ಯಃ - ಯಾವನು, ಮಾಂ-ನನ್ನನ್ನು, ಅವ್ಯಭಿಚಾರೇಣ- ಬದಲಾಯಿಸದೆ ಇರುವ (ಅನನ್ಯವಾದ), ಭಕ್ತಿಯೋಗೇನ-ಭಕ್ತಿಯೋಗದಿಂದ, ಸೇವತೇ- ಭಜಿಸುತ್ತಾನೋ, ಸಃ-ಅವನು, ಏತಾನ್-ಈ, ಗುಣಾನ್-ತ್ರಿಗುಣಗಳನ್ನು, ಸಮತೀತ್ಯ-ದಾಟಿ, ಬ್ರಹ್ಮಭೂಯಾಯ- ಮೋಕ್ಷಕ್ಕೆ, ಕಲ್ಪತೇ-ಅರ್ಹನಾಗುತ್ತಾನೆ.

ಅಂತೂ ಅನನ್ಯಭಕ್ತಿಯಿಂದ ಮಾತ್ರವೇ ಭಗವತ್ಪ್ರಾಪ್ತಿಯು ಆಗ ಬೇಕಾಗಿದೆ. ಮತ್ತು ಆ ಭಗವಂತನೇ ಈ ಸಂಸಾರವೆಂಬ ವೃಕ್ಷಕ್ಕೂ ಪರಮ ಕಾರಣನಾಗಿದ್ದಾನೆ. ಅವನನ್ನು ತಿಳಿದರೆ ಎಲ್ಲವನನೂ ತಿಳಿದಂತಾಯಿತು. ಈ ಸಂಸಾರದ ಸ್ವರೂಪವು ಹೇಗಿರುವದೆಂದರೆ ;

**ಊರ್ಧ್ವಮೂಲಮಧಃಶಾಖಂ ಅಶ್ವತ್ಥಂ ಪ್ರಾಹುರವ್ಯಯಮ್ ।**
**ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್ ॥ ೧೫-೧**

ಊರ್ಧ್ವಮೂಲಂ-ಮೇಲಕ್ಕೆ ಬೇರುಳ್ಳ, ಅಧಃಶಾಖಂ-ಕೆಳಗಡೆ ಕೊಂಬೆರೆಂಬೆಗಳುಳ್ಳ, ಅಶ್ವತ್ಥಂ-ನಾಳೆಯವರೆಗೆ ಕೂಡ ಇರುವದು ನಿಶ್ಚಯ ವಿಲ್ಲದ, (ಎಂದರೆ ವಿನಾಶಿಯಾಗಿರುವ) (ಆದರೆ), ಅವ್ಯಯಂ- ಅನಾದಿ

ಮಾಯೆಯಿಂದ ಪ್ರವೃತ್ತವಾಗಿದ್ದು ನಾಶವೇ ಇಲ್ಲದಂತೆ ಕಾಣುತ್ತಿರುವ, ಯಸ್ಯ-ಯಾವ ಈ ಸಂಸಾರವೆಂಬ ಮರಕ್ಕೆ, ಛಂದಾಂಸಿ-ವೇದಗಳೇ, ಪರ್ಣಾನಿ-ಎಲೆಗಳಾಗಿರುವವೋ ಅಂಥ ಅಶ್ವತ್ಥವನ್ನು, ಪ್ರಾಹುಃ- ಬಲ್ಲವರು ವರ್ಣಿಸಿ ಹೇಳುವರು. ಯಃ-ಯಾವನು, ತಂ-ಆ ಸಂಸಾರವೃಕ್ಷವನ್ನು ಬುಡಸಹಿತವಾಗಿ (ಎಂದರೆ ಇದರ ಮೂಲವು ಸರ್ವಜ್ಞವೂ ಸರ್ವಶಕ್ತನೂ ಆಗಿರುವ ಪರಮಾತ್ಮನೇ ಎಂದು) ವೇದ-ಅರಿತುಕೊಳ್ಳುವನೋ, ಸಃ-ಅವನು, ವೇದವಿತ್-ವೇದಾರ್ಥವನ್ನು ಬಲ್ಲವನಾಗುವನು.

ಇಂಥ ಸಂಸಾರವನ್ನು ದಾಟಿ ಇದರ ಮೂಲನಾದ ಭಗವನಂತನನ್ನು ಯಾರು ಪಡೆಯುತ್ತಾರೆಂದರೆ :

**ನಿರ್ಮಾನಮೋಹಾ ಜಿತಸಂಗದೋಷಾಃ**
**ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ ।**
**ದ್ವಂದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈ**
**ರ್ಗಚ್ಛನ್ತ್ಯಮೂಢಾಃ ಪದಮವ್ಯಯಂ ತತ್ ॥ ೧೫-೫**

ನಿರ್ಮಾನಮೋಹಾಃ-ಅಭಿಮಾನಮೋಹಗಳನ್ನು ಮೀರಿದ, ಜಿತ ಸಂಗದೋಷಾಃ-ವಿಷಯಸಂಗಗಳನ್ನು ಗೆದ್ದ, ವಿನಿವೃತ್ತಕಾಮಾಃ- ಕಾಮಗಳಿಂದ ಹಿಂದಿರುಗಿದ, ಅಧ್ಯಾತ್ಮನಿತ್ಯಾಃ-ಪರಮಾತ್ಮಸ್ವರೂಪವನ್ನೇ ಆಲೋಚಿಸುವದರಲ್ಲಿ ತತ್ಪರರಾದ, ಅಮೂಢಾಃ-ಮೂಢರಲ್ಲದ ವಿವೇಕಿಗಳು, ಸುಖದುಃಖಗಳೆಂಬ, ದ್ವಂದ್ವೈಃ-ಪ್ರಿಯಾಪ್ರಿಯಗಳೇ ಮುಂತಾದ ದ್ವಂದ್ವಗಳಿಂದ, ವಿಮುಕ್ತಾಃ- ಬಿಡ ಲ್ಪಟ್ಟವರಾಗಿ, ತತ್-ಆ ಪ್ರಸಿದ್ಧವಾದ, ಅವ್ಯಯಂ-ನಾಶರಹಿತವಾದ, ಪದಂ-ವಿಷ್ಣುಪದವನ್ನು, ಗಚ್ಛನ್ತಿ- ಹೊಂದುವರು.

ಈ ವಿಷ್ಣುಸ್ವರೂಪವು ಎಲ್ಲರ ಅಂತರ್ಯಾಮಿಯಾಗಿದೆ. ಈ ಸ್ವರೂಪವು ನಾನಾವಿಭೂತಿಗಳ ರೂಪದಿಂದ ಎಲ್ಲೆಲ್ಲೂ ತೋರುತ್ತಿದೆ. ಜೀವನಾಗಿ ತೋರುವದೂ ಇದೇ. ಆದ್ದರಿಂದ ಎಲೈ ಅರ್ಜುನನೆ, ನನ್ನ ಒಂದು ವಿಭೂತಿಯನ್ನು ಉದಾಹರಣಾರ್ಥವಾಗಿ ಹೇಳುವೆನು. ಕೇಳು :

**ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ।**
**ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್ ॥೧೫-೧೪**

ಅಹಂ-ನಾನು, ವೈಶ್ವಾನರೋ ಭೂತ್ವಾ-ವೈಶ್ವಾನರನೆಂಬ ಜಠರಾಗ್ನಿಯ ರೂಪದಿಂದ, ಪ್ರಾಣಿನಾಂ-ಜೀವಿಗಳ, ದೇಹಮ್-ಶರೀರವನ್ನು, ಆಶ್ರಿತಃ-ಆಶ್ರಯಿಸಿದವನಾಗಿ, ಪ್ರಾಣಾಪಾನಸಮಾಯುಕ್ತಃ-ಪ್ರಾಣಾಪಾನಗಳೆಂಬ ವಾಯುಗಳ ವ್ಯಾಪಾರದಿಂದ ಕೂಡಿ, ಚತುರ್ವಿಧಂ-ಭಕ್ಷ್ಯ ಭೋಜ್ಯ ಲೇಹ್ಯ ಚೋಷ್ಯಗಳೆಂಬ ನಾಲ್ಕು ವಿಧವಾದ, ಅನ್ನಂ-ಅನ್ನವನ್ನು ಪಚಾಮಿ- ಅರಗಿಸುತ್ತೇನೆ.

ಇಂಥ ಜಗತ್ಕಾರಣವಾದ ಮತ್ತು ಜಗತ್ತಿನ ಕಾರ್ಯಕಾರಣಗಳನ್ನೂ ಮೀರಿದ ನನ್ನನ್ನು ಪುರುಷೋತ್ತಮನೆಂದು ಬಲ್ಲವರು ಕರೆಯುತ್ತಾರೆ. ಹೇಗೆಂದರೆ :

**ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।**
**ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ।೧೫-೧೮**

ಯಸ್ಮಾತ್-ಯಾವ ಕಾರಣದಿಂದ, ಅಹಂ-ನಾನು, ಕ್ಷರಂ-ನಾಶವಾಗುವ ಪ್ರಪಂಚವನ್ನು , ಅತೀತಃ-ದಾಟಿರುವೆನೋ, ಅಕ್ಷರಾದಪಿ ಚ - ಸಂಸಾರಕಾರಣವಾದ ಅವ್ಯಕ್ತಕ್ಕಿಂತಲೂ, ಉತ್ತಮಃ-ಶ್ರೇಷ್ಠನೋ (ಮೇಲಿರುವವನೋ), ಅತಃ-ಆದ್ದರಿಂದ, ಲೋಕೇ-ಲೋಕದಲ್ಲಿಯೂ, ವೇದೇ ಚ -ವೇದದಲ್ಲಿಯೂ, ಪುರುಷೋತ್ತಮಃ-ಪುರುಷೋತ್ತಮನೆಂದು, ಪ್ರಥಿತಃ-ಪ್ರಸಿದ್ಧನಾಗಿರುವೆನು.

ಇಂಥ ನನ್ನ ಪುರುಷೋತ್ತಮತತ್ತ್ವವನ್ನು ಅರಿತುಕೊಳ್ಳಲು ದೈವೀ ಸಂಪತ್ತಿನ ಆವಶ್ಯಕತೆ ಬಹಳವಾಗಿದೆ. ದೈವಸಂಪತ್ತಿಗೆ ವಿರುದ್ಧವಾದದ್ದು ಆಸುರಸಂಪತ್ತು. ಇವುಗಳಲ್ಲಿ ದೈವಸಂಪತ್ತುಗಳು ಯಾವವೆಂದರೆ :

**ಅಭಯಂ ಸತ್ತ್ವಸಂಶುದ್ಧಿಃ ಜ್ಞಾನಯೋಗವ್ಯವಸ್ಥಿತಿಃ ।**
**ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್ ॥ ೧೬-೧**

**ಅಹಿಂಸಾ ಸತ್ಯಮಕ್ರೋಧಃ ತ್ಯಾಗಃ ಶಾನ್ತಿರಪೈಶುನಮ್ ।**
**ದಯಾ ಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಮ್ ॥**
**೧೬-೨**

**ತೇಜಃ ಕ್ಷಮಾ ಧೃತಿಃ ಶೌಚಮದ್ರೋಹೋ ನಾತಿಮಾನಿತಾ ।**
**ಭವನ್ತಿ ಸಂಪದಂ ದೈವೀಮಭಿಜಾತಸ್ಯ ಭಾರತ ॥ ೧೬-೩**

ಅಭಯ, ಅಂತಃಕರಣಶುದ್ಧಿ, ಆತ್ಮಾದಿಪದಾರ್ಥಗಳನ್ನು ಅರಿತು ತನ್ನ ಅನುಭವಕ್ಕೆ ಅಳವಡಿಸಿಕೊಳ್ಳುವ ಯೋಗನಿಷ್ಠೆ, ದಾನ, ಬಾಹ್ಯೇಂದ್ರಿಯಗಳ ಹಿಡಿತ, ಶ್ರೌತಸ್ಮಾರ್ತಯಜ್ಞಗಳನ್ನು ಮಾಡುವದು, ವೇದಾಧ್ಯಯನ, ಏಕಾಗ್ರತಾ ರೂಪವಾದ ತಪಸ್ಸು, ಸರಳತನ, ಅಹಿಂಸೆ, ಸತ್ಯ, ಸಿಟ್ಟುಗೊಳ್ಳದೆ ಇರುವದು, ಸಂನ್ಯಾಸರೂಪವಾದ ತ್ಯಾಗ, ಮನಶ್ಶಾಂತಿ, ಚಾಡಿಹೇಳದೆ ಇರುವಿಕೆ, ಪ್ರಾಣಿಗಳಲ್ಲಿ ದಯೆ, ಇಂದ್ರಿಯಚಾಪಲ್ಯವಿಲ್ಲದಿರುವದು, ಮೃದುಸ್ವಭಾವ, ನಾಚಿಕೆ, ನಿಷ್ಕಾರಣ ವಾಗಿ ಕೈಕಾಲುಗಳನ್ನು ಕುಣಿಸದೆ ಇರುವದು, ದಿಟ್ಟತನ, ಕ್ಷಮೆ (ಸಹನೆ), ಇಂದ್ರಿಯಗಳು ಕುಸಿಯದಂತೆ ಸ್ಥಿರಗೊಳಿಸುವದು, ಶುಚಿತ್ವ, ಯಾರಿಗೂ ಕೇಡು ಬಗೆಯದೆ ಇರುವದು, ದುರಭಿಮಾನವಿಲ್ಲದಿರುವದು-ಇವುಗಳು, ಭಾರತ - ಎಲೈ ಭರತಶ್ರೇಷ್ಠನೆ, ದೈವೀಸಂಪದಂ-ದೈವಸಂಪತ್ತನ್ನು, ಅಭಿಜಾತಸ್ಯ-ಪಡೆದು ಹುಟ್ಟಿದವನಿಗೆ, ಭವನ್ತಿ-ಉಂಟಾಗುವವು. ಇನ್ನು ಆಸುರಸಂಪತ್ತುಗಳು ಯಾವವೆಂದರೆ :

**ದಂಭೋ ದರ್ಪೋಽತಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ ।**
**ಅಜ್ಞಾನಂ ಚಾಭಿಚಾತಸ್ಯ ಪಾರ್ಥ ಸಂಪದಮಾಸುರೀಮ್ ॥ ೧೬-೪**

ಪಾರ್ಥ-ಎಲೈ ಅರ್ಜುನನೆ, ದಂಭಃ-ಅಹಂಕಾರವು, ದರ್ಪಃ-ವಿದ್ಯೆ, ಹಣ-ಇವುಗಳ ಮದವು, ಅತಿಮಾನಃ-ಹೆಚ್ಚಿನ ಜಂಭವು, ಕ್ರೋಧಃ-ಸಿಟ್ಟು, ಪಾರುಷ್ಯಂ-ನಿಷ್ಠುರತೆ, ಅಜ್ಞಾನಂ ಚ-ಮತ್ತು ಅವಿವೇಕಜ್ಞಾನವು ಇವುಗಳು ಆಸುರೀಂ ಸಂಪದಂ-ಆಸುರಸಂಪತ್ತನ್ನು, ಅಭಿಜಾತಸ್ಯ-ಪಡೆದುಹುಟ್ಟಿದವನಿಗೆ (ಉಂಟಾಗುವವು)

ಇವುಗಳಲ್ಲಿ-

**ದೈವೀಸಪಂಪದ್ವಿಮೋಕ್ಷಾಯ ನಿಬನ್ಧಾಯಾಸುರೀ ಮತಾ ।**
**ಮಾ ಶುಚಃ ಸಂಪದಂ ದೈವೀಮಭಿಜಾತೋಽಸಿ ಪಾಂಡವ ॥ ೧೬-೫**

ದೈವೀಸಂಪತ್-ದೈವಸಂಪತ್ತು, ವಿಮೋಕ್ಷಾಯ-ಸಂಸಾರದುಃಖದಿಂದ

ಬಿಡುಗಡೆಗೂ, ಆಸುರೀ-ಅಸುರಸಂಪತ್ತು, ನಿಬಂಧಾಯ- ಬಂಧನಕ್ಕೂ ಕಾರಣವೆಂದು, ಮತಾ-ತಿಳಿಯಲ್ಪಟ್ಟಿದೆ (ಬಲ್ಲವರು ಹೇಳುವರು). ಆದರೆ, ಪಾಂಡವ-ಎಲೈ ಅರ್ಜುನನೆ, ನೀನು, ದೈವೀಂ ಸಂಪದಂ- ದೈವಸಂಪತ್ತನ್ನು ಕುರಿತು ಮಾ ಶುಚಃ-ಶೋಕಿಸಬೇಡ, ಏಕೆಂದರೆ, ಅಭಿಜಾತೋಽಸಿ-ಅದನ್ನು ಪಡೆದೇ ಹುಟ್ಟಿರುವೆ, ಮುಂದೆ ಒಳ್ಳೆಯದನ್ನು ಹೊಂದುವೆ.

ಮನುಷ್ಯನು ದೈವಸಂಪತ್ತನ್ನು ಪ್ರಯತ್ನಪೂರ್ವಕವಾಗಿ ಸಂಪಾದಿಸಿಕೊಳ್ಳಬೇಕು. ಆಸುರೀಸಂಪತ್ತನ್ನು ಬಿಡಬೇಕು. ಮುಖ್ಯವಾಗಿ ಬಿಡಲೇಬೇಕಾದ ಮೂರು ದೋಷಗಳು ಯಾವವೆಂದರೆ :

**ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।**
**ಕಾಮಃ ಕ್ರೋಧಃ ತಥಾ ಲೋಭಃ ತಸ್ಮಾದೇತತ್ತ್ರಯಂ ತ್ಯಜೇತ್ ॥**

**೧೬-೨೧**

ನರಕಸ್ಯ-ನರಕಕ್ಕೆ ಕಾರಣವಾದ ಮತ್ತು, ಆತ್ಮನಃ-ತನ್ನ, ನಾಶನಮ್ - ನಾಶಕ್ಕೂ ಕಾರಣವಾದ, ಕಾಮಃ-ಆಶೆಯು, ಕ್ರೋಧಃ-ಸಿಟ್ಟು, ತಥಾ-ಹಾಗೆಯೇ, ಲೋಭಃ-ಜಿಪುಣತನವು ಎಂಬೀ, ತ್ರಿವಿಧಂ ಇದಂ ದ್ವಾರಂ- ಈ ಮೂರು ಪ್ರಕಾರವಾದ ಬಾಗಿಲು ಪ್ರಸಿದ್ಧವಾಗಿದೆ. ಆದ್ದರಿಂದ, ಏತತ್ತ್ರಯಂ-ಈ ಮೂರನ್ನೂ, ತ್ಯಜೇತ್-ಬಿಡಬೇಕು.

ಹೀಗೆ ದುರ್ಗುಣಗಳನ್ನು ತ್ಯಾಗಮಾಡುವದರ ಜೊತೆಗೆ ಶ್ರದ್ಧಾದಿ ಸದ್ಗುಣಗಳನ್ನೂ ಬೆಳೆಸಿಕೊಳ್ಳಬೇಕು. ಮನುಷ್ಯನಿಗೆ ಶ್ರದ್ಧೆಯೇ ಪುರುಷಾರ್ಥಸಾಧನವು. ಹೇಗೆಂದರೆ :

**ಸತ್ತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ ।**
**ಶ್ರದ್ಧಾಮಯೋಽಯಂ ಪುರುಷಃ ಯೋ ಯಚ್ಛ್ರದ್ಧಃ ಸ ಏವ ಸಃ ॥**

**೧೭-೩**

ಭಾರತ-ಎಲೈ ಭರತವಂಶೋತ್ಪನ್ನನೆ, ಸರ್ವಸ್ಯ-ಎಲ್ಲರಿಗೂ, ಸತ್ವಾನುರೂಪಾ-ಅವರವರ ಮನಸ್ಸಿನ ಭಾವನೆಗೆ ಅನುಗುಣವಾಗಿ, ಶ್ರದ್ಧಾ- ಶ್ರದ್ಧೆ (ನಂಬಿಕೆ)ಯು, ಭವತಿ-ಉಂಟಾಗುತ್ತದೆ. ಅಯಂ-ಈ, ಪುರುಷಃ- ಮನುಷ್ಯನು,

ಶ್ರದ್ಧಾಮಯಃ-ಶ್ರದ್ಧೆಯಿಂದ ತುಂಬಿರುವನು, ಯಃ- ಯಾವನು, ಯಚ್ಛ್ರದ್ಧಃ- ಯಾವ ಶ್ರದ್ಧೆಯುಳ್ಳವನೋ, ಸಃ-ಅವನು, ಸ ಏವ - ಅದೇ ಆಗಿರುವನು.

ಹೀಗೆ ಅವರವರ ಅಂತಃಕರಣದ ಸ್ವಭಾವಕ್ಕೆ ತಕ್ಕಂತೆ ಉಂಟಾಗುವ ಮೂರು ವಿಧವಾದ ಶ್ರದ್ಧೆಗಳಿಗೆ ಅನುಗುಣವಾಗಿ ಜನರು ದೇವತೆಗಳನ್ನು ಪೂಜಿಸುತ್ತಾರೆ. ಹೇಗೆಂದರೆ :

**ಯಜನ್ತೇ ಸಾತ್ವಿಕಾ ದೇವಾನ್ ಯಕ್ಷರಕ್ಷಾಂಸಿ ರಾಜಸಾಃ ।**
**ಪ್ರೇತಾನ್ ಭೂತಗಣಾಂಶ್ಚಾನ್ಯೇ ಯಜನ್ತೇ ತಾಮಸಾ ಜನಾಃ ॥**

ಸಾತ್ತ್ವಿಕಾಃ-ಸಾತ್ವಿಕರು, ದೇವಾನ್-ದೇವತೆಗಳನ್ನು, ಯಜನ್ತೇ- ಆರಾಧಿಸುತ್ತಾರೆ. ರಾಜಸಾಃ-ರಾಜಸರು, ಯಕ್ಷರಕ್ಷಾಂಸಿ-ಯಕ್ಷರಾಕ್ಷಸರುಗಳನ್ನು, ಅನ್ಯೇ-ಉಳಿದ, ತಾಮಸಾ ಜನಾಃ-ತಾಮಸಜನರು ಪ್ರೇತಾನ್- ಪ್ರೇತಗಳನ್ನೂ, ಭೂತಗಣಾನ್-ಭೂತಗಣಗಳನ್ನೂ, ಯಜನ್ತೇ - ಆರಾಧಿಸುತ್ತಾರೆ.

ಈಗ ಮೂರು ವಿಧವಾದ ತಪಸ್ಸುಗಳನ್ನು ವಿವರಿಸುವೆನು. ಕೇಳು :

**ದೇವದ್ವಿಜಗುರುಪ್ರಾಜ್ಞಪೂಜನಂ ಶೌಚಮಾರ್ಜವಮ್ ।**
**ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪ ಉಚ್ಯತೇ॥ ೧೭-೧೪**

ದೇವ...ಪೂಜನಂ-ದೇವತೆಗಳು, ಬ್ರಾಹ್ಮಣರು, ಗುರುಗಳು, ಜ್ಞಾನಿಗಳು- ಇವರುಗಳನ್ನು ಗೌರವಿಸುವದು, ಶೌಚಂ-ಶುಚಿಯಾಗಿರುವದು, ಆರ್ಜವಮ್-ಸರಳತನ, ಬ್ರಹ್ಮಚರ್ಯಂ-ಬ್ರಹ್ಮಚರ್ಯವು, ಅಹಿಂಸಾ ಚ - ಮತ್ತು ಅಹಿಂಸೆಯು ಇವುಗಳು, ಶಾರೀರಂ ತಪಃ-ಶರೀರಪ್ರಧಾನವಾದ ತಪಸ್ಸೆಂದು, ಉಚ್ಯತೇ- ಹೇಳಲ್ಪಡುವದು.

**ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್ ।**
**ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ ॥ ೧೭-೧೫**

ಅನುದ್ವೇಗಕರಂ - ಮತ್ತೊಬ್ಬರಿಗೆ ನೋವುಂಟಾಗದೆ ಇರುವಂಥ, ಸತ್ಯಂ- ನಿಜವಾದ, ಪ್ರಿಯಹಿತಂ - ಪ್ರಿಯವಾಗಿಯೂ ಹಿತವಾಗಿಯೂ ಇರುವ, ಯತ್-ಯಾವ, ವಾಕ್ಯಂ - ಮಾತು ಇರುವದೋ ಅದು, ಸ್ವಾಧ್ಯಾಯಾಭ್ಯಸನಂ -

ವೇದಾಧ್ಯಯನವನ್ನು ಮಾಡುವದು, ವಾಙ್ಮಯಂ - ಮಾತು (ನಾಲಗೆ) ಪ್ರಧಾನವಾದ, ತಪಃ - ತಪಸ್ಸೆಂದು, ಉಚ್ಯತೇ - ಹೇಳಲ್ಪಡುತ್ತದೆ.

**ಮನಃಪ್ರಸಾದಃ ಸೌಮ್ಯತ್ವಂ ಮೌನಮಾತ್ಮವಿನಿಗ್ರಹಃ ।**
**ಭಾವಸಂಶುದ್ಧಿರಿತ್ಯೇತತ್ತಪೋ ಮಾನಸಮುಚ್ಯತೇ ॥ ೧೭-೧೬**

ಮನಃಪ್ರಸಾದಃ-ಮನಸ್ಸಿನ ಪ್ರಸನ್ನತೆ, ಸೌಮ್ಯತ್ವಂ-ಸೌಮನಸ್ಯ ಎಂದರೆ ಮುಖವು ಶಾಂತವಾಗಿರುವದೇ ಮುಂತಾದವುಗಳು, ಮೌನಂ- ಮಾತನಾಡದಿರುವದು, ಆತ್ಮನಿಗ್ರಹಃ-ಮನಸ್ಸನ್ನು ಹಿಡಿದಿಟ್ಟುಕೊಳ್ಳುವದು, ಭಾವಸಂಶುದ್ಧಿಃ- ವಂಚನೆ ಮೋಸಗಳಿಲ್ಲದೆ ಸ್ವಚ್ಛವಾದ ಬಿಚ್ಚುಮನಸ್ಸುಳ್ಳವನಾಗಿರುವದು, ಇತ್ಯೇತತ್- ಇದು, ಮಾನಸಂ ತಪಃ-ಮನಃಪ್ರಧಾನವಾದ ತಪಸ್ಸೆಂದು, ಉಚ್ಯತೇ- ಹೇಳಲ್ಪಡುವದು.

ಕೊನೆಯದಾಗಿ ಅರ್ಜುನನು ಸಂನ್ಯಾಸತ್ಯಾಗಗಳ ತತ್ತ್ವವೇನು ? ಅದನ್ನು ತಿಳಿಸಬೇಕೆಂದು ಕೇಳಿದನು. ಕೃಷ್ಣನು ಸೂಕ್ಷ್ಮವಾಗಿ ಅವುಗಳ ರಹಸ್ಯವನ್ನು ವಿವರಿಸಿ ಮುಖ್ಯವಾಗಿ ಫಲಾಸಕ್ತಿಯನ್ನು ಬಿಟ್ಟು ಭಗವದರ್ಪಣಬುದ್ಧಿಯಿಂದ ಕರ್ತವ್ಯಕರ್ಮವನ್ನು ಮಾಡುತ್ತಿರುವದೇ ಶ್ರೇಯಸ್ಕರವೆಂದು ಹೇಳಿದನು. ಮತ್ತು ಕರ್ಮವನ್ನು ಅಜ್ಞಾನದಶೆಯಲ್ಲಿ ಬಿಡುವದಕ್ಕಿಂತ ಮಾಡುವದೇ ಲೇಸು. ಯಜ್ಞದಾನತಪಸ್ಸುಗಳನ್ನಂತೂ ಮಾಡಲೇ ಬೇಕು - ಎಂದು ತಿಳಿಸುತ್ತಾ ಹೀಗೆಂದನು :

**ಯಜ್ಞದಾನಂ ತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ।**
**ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥ ೧೮-೫**

ಯಜ್ಞಃ -ಯಜ್ಞವು, ದಾನಂ-ದಾನವು, ತಪಃ-ತಪಸ್ಸು ಈ ಮೂರು, ಕರ್ಮ-ಕೆಲಸಗಳು, ನ ತ್ಯಾಜ್ಯಂ-ಬಿಡಲ್ಪಡತಕ್ಕದ್ದಲ್ಲ. ಕಾರ್ಯಮೇವ ತತ್ - ಅದು ಮಾಡತಕ್ಕದ್ದೇ. ಯಜ್ಞೋ ದಾನಂ ತಪಶ್ಚೈವ-ಯಜ್ಞದಾನತಪಸ್ಸುಗಳು, ಮನೀಷಿಣಾಮ್ - ಫಲವನ್ನು ಬಯಸದೆ ಕರ್ಮ ಮಾಡುವ ವಿವೇಕಿಗಳಿಗೆ, ಪಾವನಾನಿ-ಪವಿತ್ರವಾದವುಗಳು.

ಆದ್ದರಿಂದ ಸಾಧಕನು ಈಶ್ವರಾರ್ಪಣಬುದ್ಧಿಯಿಂದ ತನ್ನ ಕರ್ಮಗಳನ್ನು ಮಾಡಬೇಕು. ಹೇಗೆಂದರೆ :

**ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।**
**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥ ೧೮-೪೬**

ಭೂತಾನಾಂ-ಪ್ರಾಣಿಗಳ, ಪ್ರವೃತ್ತಿಃ-ವ್ಯಾಪಾರವು, ಯತಃ-ಯಾವನಿಂದಲೋ, ಇದಂ ಸರ್ವಂ-ಈ ಪ್ರಪಂಚವೆಲ್ಲವೂ, ಯೇನ-ಯಾವನಿಂದ, ತತಮ್-ವ್ಯಾಪ್ತವಾಗಿರುವದೋ, ತಂ-ಆ ಪರಮೇಶ್ವರನನ್ನು ಮಾನವಃ-ಸಾಧಕನು, ಸ್ವಕರ್ಮಣಾ-ತನ್ನ ತನ್ನ ಕೆಲಸಗಳಿಂದಲೇ, ಅಭ್ಯರ್ಚ್ಯ-ಪೂಜಿಸಿ, ಸಿದ್ಧಿಂ-ಭಗವಂತನನ್ನು ಸೇರಲು ತಕ್ಕ ಯೋಗ್ಯತಾರೂಪವಾದ ಸಿದ್ಧಿಯನ್ನು, ವಿನ್ದತಿ-ಪಡೆಯುವನು.

ಆದ್ದರಿಂದ ಪ್ರತಿಯೊಬ್ಬನೂ ತನ್ನ ತನ್ನ ಸ್ವಧರ್ಮವನ್ನು ಆಚರಿಸಬೇಕು. ಅದೇ ಒಳ್ಳೆಯದು. ಹೇಗೆಂದರೆ :

**ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।**
**ಸ್ವಭಾವನಿಯತಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥ ೧೮-೪೭**

ಸ್ವನುಷ್ಠಿತಾತ್-ಚೆನ್ನಾಗಿ ಮಾಡಿದಂಥ, ಪರಧರ್ಮಾತ್- ಮತ್ತೊಬ್ಬರ ಧರ್ಮಕ್ಕಿಂತಲೂ, ಸ್ವಧರ್ಮಃ - ತನ್ನ (ಕುಲ) ಧರ್ಮವು, ವಿಗುಣಃ-ಸ್ವಲ್ಪ ಹೀನವಾಗಿದ್ದರೂ ಅದೇ, ಶ್ರೇಯಾನ್-ಶ್ರೇಯಸ್ಕರವಾದದ್ದು. ಆದ್ದರಿಂದ ಮನುಷ್ಯನು, ಸ್ವಭಾವನಿಯತಂ-ತನ್ನ ಸ್ವಭಾವಕ್ಕನುಗುಣವಾಗಿ ಗೊತ್ತುಪಡಿಸಿದ, ಕರ್ಮ-ಕೆಲಸವನ್ನು ಕುರ್ವನ್-ಮಾಡುತ್ತಿದ್ದರೆ, ಕಿಲ್ಬಿಷಮ್-ಪಾಪವನ್ನು, ನಾಪ್ನೋತಿ-ಹೊಂದುವದಿಲ್ಲ.

ಹೀಗಿರುವದರಿಂದ ಸಾರಭೂತವಾದ ಈ ನನ್ನ ಮಾತನ್ನು ಕೇಳು :

**ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।**
**ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥**
**೧೮-೬೧**

**ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।**
**ತತ್ಪ್ರಸಾದಾತ್ ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥**
**೧೮-೬೨**

ಅರ್ಜುನ -ಎಲೈ ಅರ್ಜುನನೆ, ಸರ್ವಭೂತಾನಾಂ-ಎಲ್ಲಾ ಪ್ರಾಣಿಗಳ, ಹೃದ್ದೇಶೇ-ಹೃದಯದಲ್ಲಿ, ಈಶ್ವರಃ-ಈಶ್ವರನು ಇದ್ದುಕೊಂಡು, ಸರ್ವಭೂತಾನಿ - ಎಲ್ಲಾ ಭೂತಗಳನ್ನೂ, ಮಾಯಯಾ-ಮಾಯೆಯಿಂದ, ಯಂತ್ರಾರೂಢಾ ನೀವ-ಯಂತ್ರಗಳನ್ನೇರಿದ ಗೊಂಬೆಗಳಂತೆ, ಭ್ರಾಮಯನ್-ಆಟವಾಡಿಸುತ್ತಾ ತಿಷ್ಠತಿ-ಇದ್ದುಕೊಂಡಿರುತ್ತಾನೆ.

ಭಾರತ-ಎಲೈ ಭರತಶ್ರೇಷ್ಠನೆ, ಸರ್ವಭಾವೇನ-ಎಲ್ಲಾರೀತಿಯಿಂದಲೂ, ತಮೇವ-ಅವನನ್ನೇ, ಶರಣಂ ಗಚ್ಛ-ಆಶ್ರಯಿಸಿ ಶರಣುಹೊಂದು. ತತ್ಪ್ರಸಾದಾತ್-ಆತನ ಅನುಗ್ರಹದಿಂದ, ಪರಾಂ-ಹೆಚ್ಚಿನ, ಶಾಂತಿಂ-ಶಾಂತಿಯನ್ನೂ, ಶಾಶ್ವತಮ್-ನಾಶರಹಿತವಾದ, ಸ್ಥಾನಂ-ಪದವಿಯನ್ನೂ, ಪ್ರಾಪ್ಸ್ಯಸಿ- ಪಡೆಯುವೆ.

ನೀನು ನನಗೆ ಅತ್ಯಂತ ಪ್ರಿಯನಾದ್ದರಿಂದ ಮತ್ತೊಮ್ಮೆ ಹಿತವಾದ ರಹಸ್ಯವಾದ ಮಾತನ್ನು ಹೇಳುವೆನು, ಕೇಳು.

**ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।**
**ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥ ೧೮-೬೫**

ಮನ್ಮನಾ ಭವ-ನನ್ನಲ್ಲೇ ಮನಸ್ಸಿಡು, ಮದ್ಭಕ್ತಃ-ನನ್ನನ್ನೇ ಸೇವಿಸುವನಾಗು, ಮದ್ಯಾಜೀ-ನನಗಾಗಿ ಎಲ್ಲಾ ಯಜ್ಞಾದಿಕರ್ಮಗಳನ್ನೂ ಮಾಡು, ಮಾಂ-ನನ್ನನ್ನು, ನಮಸ್ಕುರು-ನಮಸ್ಕರಿಸು. ಹೀಗಾದರೆ, ಸತ್ಯಂ- ನಿಜವಾಗಿಯೂ, ಮಾಮೇವ-ನನ್ನನ್ನೇ, ಏಷ್ಯಸಿ-ಸೇರುವೆ, ತೇ-ನಿನಗೆ, ಪ್ರತಿಜಾನೇ-ಪ್ರತಿಜ್ಞೆಮಾಡಿ ಹೇಳುವೆನು. ಏಕೆಂದರೆ ನೀನು, ಮೇ-ನನಗೆ ಪ್ರಿಯೊಽಸಿ-ಪ್ರಿಯನಾಗಿದ್ದೀಯೆ.

ಕೊನೆಯದಾಗಿ ಈ ಉಪದೇಶವನ್ನು ಕೇಳು.

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।**
**ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥**
**೧೮-೬೬**

ಸರ್ವಧರ್ಮಾನ್ - ಎಲ್ಲಾ ಧರ್ಮಗಳನ್ನೂ, ಪರಿತ್ಯಜ್ಯ - ಕೈಬಿಟ್ಟು, ಮಾಮೇಕಂ - ನನ್ನೊಬ್ಬನನ್ನೇ, ಶರಣಂ ವ್ರಜ - ಶರಣುಹೊಂದು. ಅಹಂ -

ನಾನು, ತ್ವಾ-ನಿನ್ನನ್ನು, ಸರ್ವಪಾಪೇಭ್ಯಃ - ಎಲ್ಲಾ ಬಂಧನರೂಪವಾದ ಪಾಪ ಗಳಿಂದಲೂ, ಮೋಕ್ಷಯಿಷ್ಯಾಮಿ- ಬಿಡುಗಡೆಮಾಡಿಸುವೆನು. ಮಾ ಶುಚಃ - ದುಃಖಪಡಬೇಡ.

ಎಲೈ ಧೃತರಾಷ್ಟ್ರನೆ, ಕೇಳು. ಇದುವರೆಗೆ ವಿವರಿಸಿದಂತೆ ನಡೆದ ಕೃಷ್ಣಾರ್ಜುನರ ಸಂವಾದವನ್ನು ನಾನು ಕೇಳಿ ಆಶ್ಚರ್ಯಪಟ್ಟೆನು. ಆ ಭಗವಂತನ ವಿಶ್ವರೂಪವನ್ನು ನೆನೆಸಿಕೊಂಡಷ್ಟೂ ನನಗೆ ಸಂತೋಷ ವಾಗುತ್ತಿದೆ. ಅಂತೂ ಕೃಷ್ಣನೂ ಅರ್ಜುನನೂ ಇರುವಲ್ಲಿಯೇ ಜಯವು ಖಂಡಿತ. ಕೇಳು :

**ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋಧನುರ್ಧರಃ ।**
**ತತ್ರ ಶ್ರೀರ್ವಿಜಯೋ ಭೂತಿಃ ಧ್ರುವಾ ನೀತಿರ್ಮತಿರ್ಮಮ ।೧೮-೭೮**

ಯತ್ರ-ಎಲ್ಲಿ, ಯೋಗೇಶ್ವರಃ-ಯೋಗೇಶ್ವರನಾದ, ಕೃಷ್ಣಃ-ಕೃಷ್ಣನು ಮತ್ತು ಯತ್ರ-ಎಲ್ಲಿ, ಧನುರ್ಧರಃ-ಬಿಲ್ಲನ್ನು ಹಿಡಿದಿರುವ, ಪಾರ್ಥಃ-ಅರ್ಜುನನು ಇರುವರೋ, ತತ್ರ-ಅಲ್ಲಿ, ಶ್ರೀಃ-ಸಂಪತ್ತು, ವಿಜಯಃ- ವಿಜಯವು, ಭೂತಿಃ-ಐಶ್ವರ್ಯವು, ಧ್ರುವಾ ನೀತಿಃ-ನಿಶ್ಚಲವಾದ ನೀತಿಯೂ ಇರುವವು, ಇತಿ-ಹೀಗೆಂದು, ಮಮ-ನನ್ನ, ಮತಿಃ- ನಿಶ್ಚಯವು, ಎಂದು ಸಂಜಯನು ತನ್ನ ಮಾತನ್ನು ಮುಗಿಸಿದನು.

## ಗೀತಾಮಾಹಾತ್ಮ್ಯ

**ಗೀತಾಯಾಃ ಪುಸ್ತಕಂ ಯತ್ರ ಯತ್ರ ಪಾಠಃ ಪ್ರವರ್ತತೇ ।**
**ತತ್ರ ಸರ್ವಾಣಿ ತೀರ್ಥಾನಿ ಪ್ರಯಾಗಾದೀನಿ ತತ್ರ ವೈ ॥**

ಯತ್ರ - ಎಲ್ಲಿ, ಗೀತಾಯಾಃ-ಗೀತೆಯ, ಪುಸ್ತಕಂ-ಪುಸ್ತಕವಿರುವದೋ, ಯತ್ರ-ಎಲ್ಲಿ, ಪಾಠಃ-ಗೀತಾಪಠನವು, ಪ್ರವರ್ತತೇ- ನಡೆಯುತ್ತಿರುವದೋ, ತತ್ರ-ಅಲ್ಲಿ, ಪ್ರಯಾಗಾದೀನಿ-ತೀರ್ಥರಾಜನಾದ ಪ್ರಯಾಗವೇ ಮುಂತಾದ, ಸರ್ವಾಣಿ-ಎಲ್ಲಾ, ತೀರ್ಥಾನಿ-ತೀರ್ಥಗಳೂ ಇರುವವು, ವೈ-ಇದು ಪ್ರಸಿದ್ಧವು.

**ಗೀತಾಶ್ರಯೇಽಹಂ ತಿಷ್ಠಾಮಿ ಗೀತಾ ಮೇ ಚೋತ್ತಮಂ ಗೃಹಮ್ ।**
**ಗೀತಾಜ್ಞಾನಮುಪಾಶ್ರಿತ್ಯ ತ್ರೀನ್ ಲೋಕಾನ್ ಪಾಲಯಾಮ್ಯಹಮ್ ॥**

ಅಹಂ-ನಾನು, ಗೀತಾಶ್ರಯೇ-ಗೀತೆಯೆಂಬ ಆಶ್ರಯದಲ್ಲಿ, ತಿಷ್ಠಾಮಿ-ಇದ್ದುಕೊಂಡಿದ್ದೇನೆ, ಮೇ-ನನಗೆ, ಗೀತಾ-ಗೀತೆಯು, ಉತ್ತಮಂ- ಶ್ರೇಷ್ಠವಾದ, ಗೃಹಮ್-ಮನೆಯು. ಗೀತಾಜ್ಞಾನಮ್-ಗೀತೆಯ ತಿಳಿವಳಿಕೆಯನ್ನು, ಉಪಾಶ್ರಿತ್ಯ-ಆಶ್ರಯಿಸಿ, ಅಹಂ-ನಾನು, ತ್ರೀನ್ ಲೋಕಾನ್- ಮೂರುಲೋಕಗಳನ್ನು, ಪಾಲಯಾಮಿ-ಕಾಪಾಡುತ್ತಿದ್ದೇನೆ.

## ಮಂಗಳಂ

**ಮಂಗಳಂ ವಾಸುದೇವಾಯ ಪಾರ್ಥಾಯ ಗುಣಶಾಲಿನೇ ।**
**ಗೀತಾದೇವ್ಯೈ ಚ ಗುರವೇ ವ್ಯಾಸಾಯಾಮಿತತೇಜಸೇ ॥**

ಶ್ರೀಕೃಷ್ಣನಿಗೆ ಮಂಗಳವು, ದೈವೀಗುಣಸಂಪನ್ನನಾದ ಅರ್ಜುನನಿಗೂ ಗೀತಾದೇವಿಗೂ ಲೋಕಗುರುವಾದ ಅತಿತೇಜಸ್ವಿಗಳಾದ ವ್ಯಾಸರಿಗೂ ಮಂಗಳವು.

ಓಂ ತತ್ಸತ್

॥ ಶ್ರೀಕೃಷ್ಣಾರ್ಪಣಮಸ್ತು ॥

-----------

ಆರನೆಯ ಬಾರಿಗೆ ಮುದ್ರಣವನ್ನು ಕಂಡಿದೆಯೆಂದರೆ ಅದರ ಮಹತ್ವವನ್ನು ವಾಚಕರೇ ಊಹಿಸಿಕೊಳ್ಳಬಹುದು. **(ಆರನೆಯ ಮುದ್ರಣ : 1997, ಪು. ಡೆಮ್ಮಿ 40 + 1168)**

**೪. ಭಗವದ್ಗೀತೆಯ ಉಪನ್ಯಾಸಗಳು :** ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು ಹೊಳೆನರಸೀಪುರದ ಕಾರ್ಯಾಲಯದಲ್ಲಿ 9.6.1946 ರಿಂದ 17.12.1950 ವರೆಗೆ ಪ್ರತಿಭಾನುವಾರವೂ ಉಪನ್ಯಾಸಗಳನ್ನು ಮಾಡುತ್ತಾ ಬಂದು ಅವುಗಳನ್ನು ಸಂಸ್ಕರಿಸಿ ಪುಸ್ತಕರೂಪದಲ್ಲಿ 1953ರಲ್ಲಿ ಮೊದಲನೆಯ ಬಾರಿಗೆ ಪ್ರಕಟಿಸಿರುವ ಗ್ರಂಥ. ಒಟ್ಟು 200 ಉಪನ್ಯಾಸಗಳನ್ನು ಮಾಡಿದ ತಾರೀಖು ಮತ್ತು ಸಂಬಂಧಪಟ್ಟ ಶ್ಲೋಕಗಳನ್ನು ಸೂಚಿಸಿ ಒಂದೊಂದು ತಲೆಬರಹವನ್ನು ಹಾಕಿರುತ್ತದೆ. ಭಗವದ್ಗೀತೆಯ 700 ಶ್ಲೋಕಗಳನ್ನೂ ಅದರ ಅರ್ಥವನ್ನೂ ಕ್ರಮವಾಗಿ ಅಳವಡಿಸಲಾಗಿದೆ. ಉಪನ್ಯಾಸಗಳು ಭಾಷ್ಯದ ಅರ್ಥವನ್ನು ವಿಶದಗೊಳಿಸುವದಲ್ಲದೆ **ಗೀತೆಯಹೃದಯವನ್ನು** ಮನಗಂಡು ಅಧ್ಯಾತ್ಮಪಥದಲ್ಲಿ ನಡೆಯಬೇಕೆಂಬ ಮುಮುಕ್ಷುಗಳಿಗೆ ಒಂದು ಸುಗಮವಾದ ಮಾರ್ಗವನ್ನು ತಿಳಿಸುವದು. ಇದನ್ನು ಓದಿದವರೆಲ್ಲರೂ ಕೊಂಡಾಡಿರುತ್ತಾರೆ. 1953ರಲ್ಲಿ ಮೊದಲನೆಯ ಮುದ್ರಣದಲ್ಲಿ ಏಳು ಸಂಪುಟಗಳಲ್ಲಿ ಹೊರತಂದಿತ್ತು. ಎರಡನೆ (1987ರಲ್ಲಿ) ಮತ್ತು ಮೂರನೆಯ (1999) ಮುದ್ರಣಗಳಲ್ಲಿ ಎರಡು ಸಂಪುಟಗಳಲ್ಲಿ ಅಳವಡಿಸಿದೆ. ಮೊದಲನೆಯ ಸಂಪುಟದಲ್ಲಿ 1 ರಿಂದ 12 ಅಧ್ಯಾಯಗಳು ಎರಡನೆಯ ಸಂಪುಟದಲ್ಲಿ 13ರಿಂದ 18ನೆಯ ಅಧ್ಯಾಯ ಪೂರಾ ಒಳಗೊಂಡಿದೆ. ಸಾಮಾನ್ಯ ಜನರಿಗೂ ಅರ್ಥವಾಗುವ ಗ್ರಂಥ. **(ಮೂರನೆಯ ಮುದ್ರಣ 1999, ಸಂಪುಟ 1, 2, ಪು. ಒಟ್ಟು 1192.)**

**೫. ಗೀತಾಶಾಸ್ತ್ರಾರ್ಥವಿವೇಕ :** ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು ಭಗವದ್ಗೀತೆಯಲ್ಲಿ ಪ್ರತಿಪಾದಿಸಿರುವ **ಸಾಂಖ್ಯ-ಯೋಗ** ಎಂಬ ಎರಡು ಭಗವತ್ಪ್ರಾಪ್ತಿಯ ಮಾರ್ಗಗಳನ್ನು ಹಾಗೂ ಗೀತೆಯಲ್ಲಿ ಪ್ರತಿಪಾದಿಸಿರುವ **ವಾಸುದೇವತತ್ತ್ವವನ್ನು** **ಗೀತಾಶಾಸ್ತ್ರಾರ್ಥವಿವೇಕ** ಎಂಬ ಸಂಸ್ಕೃತ ಗ್ರಂಥದಲ್ಲಿ ಅಳವಡಿಸಿ ಕಾರ್ಯಾಲಯದ ಮೂಲಕ 1965ರಲ್ಲಿ ಪ್ರಕಟಿಸಿದ್ದರು. ಈ ಸಂಸ್ಕೃತ ಗ್ರಂಥದಿಂದ ಕೆಲವು ಪ್ರಮುಖ ವಿಷಯಗಳನ್ನು ಆರಿಸಿಕೊಂಡು ಈಗ ಗ್ರಂಥರೂಪವಾಗಿ ಹೊರತರಲಾಗಿದೆ. ಜಿಜ್ಞಾಸುಗಳಿಗೆ ಉತ್ತಮವಾದ ಪುಸ್ತಕ. **(ಮೊದಲನೆಯ ಮುದ್ರಣ : 2000 : ಪು. ಕ್ರೌ. 4 + 46)**

**ಹೆಚ್ಚಿನ ವಿವರಗಳಿಗೆ ಕೆಳಕಂಡ ವಿಳಾಸಗಳಲ್ಲಿ ಸಂಪರ್ಕಿಸಿ :**

**ಅ.ಪ್ರ.ಕಾ., 68, 6ನೇ ಮೇನ್**
**2ನೇ ಬ್ಲಾಕ್, ಟಿ.ಆರ್.ನಗರ, ಬೆಂ.-28**
**ದೂ. :080-6765548**

**ಅ.ಪ್ರ.ಕಾ., ಹೊಳೆನರಸೀಪುರ**
**ಹಾಸನಜಿಲ್ಲೆ- 573 211**
**ದೂ. : 08175-73820**

# ವೇ॥ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳ ಕಿರುಪರಿಚಯ



ಶ್ರೀ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತಪ್ರಯೋಗ ಉಭಯ ವಿದ್ವಾನ್ ದಿ॥ ಶೃಂಗೇರಿ ಶ್ರೀಕಂಠಘನಪಾಠಿಗಳವರು ಮತ್ತು ಕಮಲಮ್ಮನವರ ಸೀಮಂತ ಪುತ್ರರಾದ ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹ ಮೂರ್ತಿಗಳು ತಾ॥ 2-6-1928 ರಲ್ಲಿ ನರಸಿಂಹರಾಜಪುರದಲ್ಲಿ ಜನಿಸಿದರು. ಒಂಭತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಿಂದಲೇ ವೇದಾಧ್ಯಯನ ಕಾಲೋಚಿತಭಾಗಗಳನ್ನು ಅಭ್ಯಾಸ ಮಾಡಿದರು. 14ನೆಯ ವಯಸ್ಸಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅದೇ ಸಂದರ್ಭದಲ್ಲಿ ಪಿತೃವಿಯೋಗವಾದ್ದರಿಂದ ಆಂಗ್ಲವಿದ್ಯಾಭ್ಯಾಸದಿಂದ ನಿವೃತ್ತರಾಗಿ ಬೇಲೂರಿನಲ್ಲಿ ಸಂಸ್ಕೃತಪಾಠಶಾಲೆಗೆ ಸೇರಿ ನಾಲ್ಕು ವರ್ಷಗಳ ಕಾಲ ಸಂಸ್ಕೃತಾಭ್ಯಾಸ ಮಾಡಿ ಚಂಪೂ ನಾಟಕ(ಸಾಹಿತ್ಯ) ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ 1947ರಲ್ಲಿ ಹೊಳೆನರಸೀಪುರಕ್ಕೆ ಬಂದು ಅಧ್ಯಾತ್ಮವಿದ್ಯಾನಿಲಯಕ್ಕೆ ಸೇರಿ ಐದು ವರ್ಷಗಳ ಕಾಲ ಶಾಂಕರವೇದಾಂತಾಧ್ಯಯನವನ್ನು ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಸನ್ನಿಧಿಯಲ್ಲಿ ಅಭ್ಯಾಸಮಾಡಿ 1952 ರಲ್ಲಿ **ಅಧ್ಯಾತ್ಮವಿದ್ಯಾಪ್ರವೀಣ** ಎಂಬ ಪ್ರಶಸ್ತಿಯನ್ನು ಪಡೆದರು. ಅನಂತರ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿಯೇ ಪಂಡಿತರಾಗಿ ನೇಮಿಸಲ್ಪಟ್ಟು ಪಾಠ ಪ್ರವಚನಗಳು ಉಪನ್ಯಾಸಗಳು ಹಾಗೂ ಸಂಸ್ಥೆಯ ಆಡಳಿತ ವಿಭಾಗದಲ್ಲಿಯೂ ಸೇವೆಯನ್ನು ಸಲ್ಲಿಸುತ್ತಾ ಈಗಲೂ ಸಂಸ್ಥೆಯಲ್ಲಿ ಸೇವಾತತ್ಪರರಾಗಿದ್ದಾರೆ.

ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಾದ ಪೂಜ್ಯ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು 1975 ರಲ್ಲಿ ಬ್ರಹ್ಮೀಭೂತರಾದ ಮೇಲೆ ಇವರು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ ಸಂಪಾದಕರೂ, ಲೇಖಕರೂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಅಧ್ಯಾತ್ಮಗ್ರಂಥಗಳ ಬರಹಗಾರರೂ ಪ್ರಕಾಶಕರೂ ಆಗಿಸೇವೆ ಸಲ್ಲಿಸುತ್ತಾ ಪ್ರಧಾನ ಕಾರ್ಯಾಲಯದಲ್ಲಿಯೇ ಕಳೆದ 50 ವರ್ಷಗಳಿಂದಲೂ ಸೇವಾನಿರತರಾಗಿದ್ದಾರೆ. ಶ್ರೀಶ್ರೀಗಳವರ ಕಾಲಾನಂತರ ಈವರೆಗೆ 29 ಅಧ್ಯಾತ್ಮಗ್ರಂಥಗಳನ್ನು ರಚಿಸಿ ಹೊರತಂದಿದ್ದಾರೆ. ನಾಲ್ಕು ಪರ್ಯಾಯಗಳಲ್ಲಿ ಬ್ರಹ್ಮಸೂತ್ರ ಶಾಂಕರಭಾಷ್ಯದ ಮೇಲೆ 120 ಪ್ರವಚನಗಳನ್ನೂ ನೀಡಿದ್ದಾರೆ. ಇವು 108 ಕ್ಯಾಸೆಟ್‌ಗಳಲ್ಲಿ ಅಡಕವಾಗಿದ್ದು ಜನಪ್ರಿಯವಾಗಿವೆ. ಭಗವದ್ಗೀತೆಯ ಮೇಲಿನ ಪ್ರವಚನಗಳ 120 ಕ್ಯಾಸೆಟ್‌ಗಳು ಇವರ ಕೊಡುಗೆಯೇ ಆಗಿವೆ. ಹೀಗೆ ಪೂಜ್ಯ ಶ್ರೀ ಶ್ರೀಗಳವರ ಶಿಷ್ಯರಲ್ಲಿ ಗಣ್ಯರಾಗಿದ್ದು ಈಗಲೂ ತಮ್ಮ ಅಮೋಘಸೇವೆಯಿಂದ ಸಂಸ್ಥೆಯ ಅಭಿವೃದ್ಧಿಗೆ ಕಾರಣರಾಗಿದ್ದಾರೆ - ಎಂದು ತಿಳಿಸಲು ಸಂತೋಷಪಡುತ್ತೇವೆ.

ಪ್ರಕಾಶಕರು